5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **01**
ಸಿಡಬ್ಲೂ **01**

| | | |
|---|---|---|
| ಸಾಕ್ಷಿ ಹೆಸರು | - | ಸಚಿನ್ ಕುಮಾರ್ |
| ತಂದೆ ಹೆಸರು | - | ಭಾಸ್ಕರ್ |
| ವಯಸ್ಸು | - | **38** ವರ್ಷ |
| ಉದ್ಯೋಗ | - | ಪಿ.ಐ. ಲೋಕಯುಕ್ತ, ಚಿಕ್ಕಮಗಳೂರು |
| ವಿಳಾಸಃ | - | ಚಿಕ್ಕಮಗಳೂರು ಜಿಲ್ಲೆ. |

ಪ್ರಮಾಣ ವಚನ ಭೋದಿಸಿದ ದಿನಾಂಕಃ **27-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಮೇ **2015** ರಿಂದ ಅಕ್ಟೋಬರ್ **2016** ರವರಗೆ ಪಿಎಸ್‌ಐ.ಆಗಿ ಅಜ್ಜಂಪುರ ಪೋಲಿಸ್ ಠಾಣೆ, ತರಿಕೆರೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ **01-03-2016** ರಂದು ಮಾನ್ಯ ಎಸ್.ಪಿ. ಚಿಕ್ಕಮಗಳೂರು ಇವರು ಲಿಖಿತ ಆದೇಶವನ್ನು ನನಗೆ ನೀಡಿದ್ದು, ಅದರಂತೆ ನಾನು ಚಿಕ್ಕಮಗಳೂರು ಜಿಲ್ಲೆ ಬಸವನಹಳ್ಳಿ ಪೋಲಿಸ್ ಠಾಣೆ ಕ್ರೆಂ. ಸಂಃ **60/2016** ರಲ್ಲಿ ಆರೋಪಿತರ ಪತ್ತೆಗಾಗಿ ನೇಮಕ ಮಾಡಿದ್ದು ಅದರಂತೆ ನಾನು ಸಿಬ್ಬಂದಿಗಳಾದ ಚಾಸಃ **2** ರಿಂದ **5** ಇವರನ್ನು ಕರೆದುಕೊಂಡು ಖಾಸಗಿ ಡಸ್ಟರ್ ವಾಹನದಲ್ಲಿ ಅಜ್ಜಂಪುರದಿಂದ ಹೊರಟು ಬಸವನಹಳ್ಳಿ ಠಾಣೆಯ ದೂರಿನಲ್ಲಿದ್ದ ಪಿರ್ಯಾದಿಯ ಮೊಬೈಲ್ ನಂಬರ್ ನಿಂದ ಆರೋಪಿಗಳ ಮೊಬೈಲ್ ಗೆ ನಾವು ಚಿನ್ನದ ಖರೀದಿಸುವ ಗ್ರಾಹಕರ ಸೋಗಿನಲ್ಲಿ ಕರೆ ಮಾಡಿದ್ದು, ಅವರು ಮೊದಲು ಹಿರೆಕೆರೂರುಗೆ ಬರಲು ತಿಳಿಸಿದ್ದು, ನಂತರ ಶಿರಾಳಕೊಪ್ಪ ಬರಲು ತಿಳಿಸಿರುತ್ತಾರೆ. ಸುಮಾರು ಮಧ್ಯಾಹ್ನ **2.45** ಗಂಟೆಗೆ ಶಿರಾಳಕೊಪ್ಪದಿಂದ ಮೂರು ಕಿಮೀ ದೂರದಲ್ಲಿರುವ ಚತ್ರದ ಹಳ್ಳಿ ಎಂಬಲ್ಲಿ ಬರಲು ತಿಳಿಸಿದ್ದು, ನಾವು ಅದರಂತೆ ಆ ಸ್ಥಳಕ್ಕೆ ತೆರಳಿದಾಗ ನಮ್ಮಲಿ ಹಣ ಇರಬಹುದು ಎಂದು ಬಾವಿಸಿ ಕೆರೆ ಅಂಗಳದ ಪೊದೆಯಿಂದ ಸುಮಾರು

ಐದರಿಂದ ಎಂಟು ಜನರು ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಕಲ್ಲು ದೊಣ್ಣೆ ಹಾಗೂ ರಾಡ್ ನಿಂದ ಹಲ್ಲೆ ನಡೆಸಲು ಪ್ರಾರಂಭಿಸಿದರು.

ನಾವು ಪೋಲಿಸರು ನಮಗೆ ಹಲ್ಲೆ ಮಾಡಬೇಡಿ ಎಂದು ತಿಳಿಸಿದರೂ ಸಹ ಅವರೆಲ್ಲಾ ಮಾತನಾಡಿಕೊಂಡು ಇವರನ್ನು ಯಾವುದೇ ಕಾರಣಕ್ಕೂ ಜೀವ ಸಹಿತ ಬಿಡಬಾರದು ಎಂದು ಮಾತನಾಡಿಕೊಂಡು ಮತ್ತೆ ಹಲ್ಲೆ ನಡೆಸಲು ಪ್ರಾರಂಭಿಸಿದರು. ನಂತರ ನನ್ನ ಪ್ರಾಣ ರಕ್ಷಣೆಗೆ ನಮ್ಮ ಇಲಾಖೆಯವರು ನೀಡಿದ್ದ ಪಿಸ್ತೂಲ್ ನಿಂದ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದೆನು. ಆದರೂ ದಾಳಿ ನಿಲ್ಲದ ಕಾರಣ ಮತ್ತೆ ನಾಲ್ಕು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿರುತ್ತೇನೆ. ಇದರ ನಂತರ ಆರೋಪಿತರು ಹೆದರಿ ಓಡಿಹೋಗಿರುತ್ತಾರೆ. ನಂತರ ಮಾನ್ಯ ಎಸ್.ಪಿ. ಚಿಕ್ಕಮಗಳೂರು ಇವರಿಗೆ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿ ನಾವು ಗಾಯಗೊಂಡಿದ್ದರಿಂದ ಶಿರಾಳಕೊಪ್ಪದ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆದು, ಘಟನಾ ಸ್ಥಳವು ಸೊರಬ ಠಾಣೆಯ ವ್ಯಾಪ್ತಿಯಲ್ಲಿರುವುದರಿಂದ ನಾವು ಸಂಜೆ **7.00** ಗಂಟೆ ಪಿರ್ಯಾದು ತಯಾರಿಸಿ, ನಂತರ ಸೊರಬ ಠಾಣೆಗೆ ತೆರಳಿ ದೂರನ್ನು ನೀಡಿದ ಮೇರೆಗೆ ಅವರು **7.30** ಗಂಟೆಗೆ ಕ್ರೆಂ. ಸಂಃ **45/2016** ರಂತೆ ದೂರು ದಾಖಲಿಸಿಕೊಂಡಿರುತ್ತಾರೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1** ಎಂದು ಗುರುತಿಸಲಾಯಿತು. ನಿಪಿ-**1** ಅ ನನ್ನ ಸಹಿ.

ಆರೋಪಿತರ ದಾಳಿಯಿಂದ ನನ್ನ ಬೆನ್ನಿಗೆ, ಎದೆಗೆ ತರಚಿದ ಗಾಯಗಳಾಗಿದ್ದವು. ನಾನು ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆರೋಪಿತರು ನಮ್ಮ ಹಲ್ಲೆ ಮಾಡಲು ಪ್ರಾರಂಭಿಸಿದಾಗ ನಾವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆವು. ನಾವು ಆರೋಪಿತರ ಹಲ್ಲೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದೇ ಇದ್ದಲ್ಲಿ ಅವರ ಹಲ್ಲೆಗೆ ನೇರವಾಗಿ ಸಿಕ್ಕಿದರೆ ನಾವು ಕೊಲೆಯಾಗುವ ಸಂಭವವಿತ್ತು. ಅದೇ ದಿನ ರಾತ್ರಿ **8.30** ರಿಂದ **9.30** ಸಮಯದಲ್ಲಿ ನಾನು ನನ್ನ ಇಲಾಖಾ ಪಿಸ್ತೂಲ್ ನ್ನು ನಾಲ್ಕು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದ್ದನ್ನು ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿದ್ದು ಅದನ್ನು ಅಮಾನತ್ತು ಮಹಜರಿನಡಿ ಅಮಾತ್ತು ಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸದರಿ ಮಹಜರ್ ನ್ನು ನಿಪಿ-**2** ಎಂದು ಗುರುತಿಸಲಾಯಿತು. ನಿಪಿ-**2** ಅ ನನ್ನ ಸಹಿ. ಅದೇ ದಿನ ರಾತ್ರಿ ನಾನು ಮರು ಹೇಳಿಕೆಯನ್ನು

ನೀಡಿದ್ದು ಅದರಲ್ಲಿ ನಮ್ಮ ಮೇಲೆ ಹಲ್ಲೆಯಾಗುವ ಸಮಯದಲ್ಲಿ ಆರೋಪಿಗಳು ಒಬ್ಬರೊಬ್ಬರ ಹೆಸರು ಹೇಳುತ್ತಿದ್ದು, ಅವರ ಹೆಸರಗಳನ್ನು ಆ ವಿಚಾರವನ್ನು ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ. ಪ್ರತ್ಯಕ್ಷ ಸಾಕ್ಷಿ ಹಬೀಬುಲ್ಲಾ ಮತ್ತು ರಮೇಶ ಇವರ ಹೆಸರುನ್ನು ನನ್ನ ಮರುಹೇಳಿಕೆಯಲ್ಲಿ ನಮೂದು ಮಾಡಿರುತ್ತೇನೆ.

ದಿಃ 02–03–2016 ರಂದು ಸಿಪಿಐ.ರವರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ತೆರಳದಿದ್ದು ಅಲ್ಲಿ ಪಂಚರ ಸಮಕ್ಷಮ ಕೃತ್ಯ ನಡೆದ ಸ್ಥಳವನ್ನು ನಾನೇ ತೋರಿಸಿದ್ದು ಅದು ಶಿರಾಳಕೊಪ್ಪ ಸೊರಬ ಮುಖ್ಯರಸ್ತೆಯ ಪಶ್ಚಿಮ ದಿಕ್ಕಿನಲ್ಲಿರುವ ಚತ್ರದ ಕೆರೆಯ ಅಂಗಳವಾಗಿರುತ್ತದೆ ಅಲ್ಲಿ ಹುಡುಕಾಡಿದಾಗ ಒಂದು 9 ಇಂಚಿನ ಲೂನಾರ್ಸ ಎಂದು ಇಂಗ್ಲೀಷಿನಲ್ಲಿ ಬರೆದಿರುವ ಚಪ್ಪಲಿ, 4 ಹಿಡಿಗಾತ್ರದ ಕೊಲ್ಲು 4 ಕಾಡು ಜಾತಿಯ ಕಲ್ಲು, ಒಂದು ಇಂಚು ಉದ್ದದ ಒಂದು ಕಾಲು ಇಂಚು ಸುತ್ತಳತೆಯ ಖಾಲಿಕೋಕ್, 1 ಕಬ್ಬಿಣದ ರಾಡು, ಕಪ್ಪು ಬಣ್ಣದ ಒಂದು ಸ್ಯಾಮ್‌ಸಂಗ್ ಮೊಬೈಲ್ ಈ ಎಲ್ಲಾ ವಸ್ತುಗಳನ್ನು ಪಿ.ಐ.ರವರು ಬೆಳಿಗ್ಗೆ 9.30 ರಿಂದ 10.30 ರವರಗೆ ಅಮಾನತ್ತು ಪಡಿಸಿಕೊಂಡು, ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಸ್ಥಳ ಮಹಜರ್ ನ್ನು ನಿಪಿ–3 ಎಂದು ಗುರುತಿಸಲಾಯಿತು. ನಿಪಿ–3 ಅ ನನ್ನ ಸಹಿ. ನಿಪಿ–3 ನ್ನು ತಯಾರಿಸುವ ಸಮಯದಲ್ಲಿ ಚಾಸಃ 27 ರವರು ಒಂದು ಕಚ್ಚಾ ನಕಾಶೆಯನ್ನು ತಯಾರಿಸಿ ಹಾಜರುಪಡಿಸಿದ್ದು ಅದನ್ನು ಗುರುತಿಸುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ನಿಪಿ–4 ಎಂದು ಗುರುತಿಸಲಾಯಿತು. ನಿಪಿ–3 ನ್ನು ತಯಾರಿಸುವ ಸಮಯದಲ್ಲಿ ಎರಡು ಫೋಟೋವನ್ನು ತೆಗೆದಿದ್ದು ಅವುಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅವುಗಳನ್ನು ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು.

ದಿಃ 07–03–2016 ರಂದು ಸೊರಬ ಠಾಣೆಯಿಂದ ಕರೆ ಮಾಡಿ ಈ ಪ್ರಕರಣಕ್ಕೆ ಸಂಬಂಧಿಸಿದ 4 ಜನ ಆರೋಪಿತರನ್ನು ದಸ್ತಗಿರಿ ಮಾಡಿದ್ದೇವೆ ಎಂದು ತಿಳಿಸಿದ್ದರ ಮೇರೆಗೆ ನಾವು ಠಾಣೆಗೆ ತೆರಳಿ ಆ ವ್ಯಕ್ತಿಗಳನ್ನು ನೋಡಿ ನನ್ನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಿಸಿದ 4 ಜನ ಆರೋಪಿತರು ಇವರುಗಳೇ ಎಂದು ಮರು ಹೇಳಿಕೆ ನೀಡಿರುತ್ತೇನೆ. ಸದರಿ ಆರೋಪಿತರು ವೆಂಕಟೇಶ್, ಸುಭಾಷ್,

ನಾಗೇಶ್, ಮತ್ತು ಇನ್ನೊಬ್ಬ ವ್ಯಕ್ತಿ. ಸುಭಾಷ್ ಈತನಿಂದ ಒಂದು ಕಬ್ಬಿಣದ ರಾಡನ್ನು ಅಮಾನತ್ತು ತನಿಖಾಧಿಕಾರಿಯವರು ಪಡಿಸಿಕೊಂಡಿರುತ್ತೇವೆ. ಆರೋಪಿ ಸುಭಾಷ್ನಿಂದ ಅಮಾನತ್ತು ಪಡಿಸಿಕೊಂಡ ಕಬ್ಬಿಣದ ರಾಡ್ ನ್ನು ನನಗೆ ತೋರಿಸಿದ್ದು ಅದನ್ನು ಗುರುತಿಸುತ್ತೇನೆ.

ಮಾರ್ಚ ತಿಂಗಳ **2016** ರಂದು ಸೊರಬ ಠಾಣಯಿಂದ ಕರೆ ಮಾಡಿ ಮತ್ತೆ ಇನ್ನಿಬ್ಬರು ಆರೋಪಿತರನ್ನು ದಸ್ತಗಿರಿ ಮಾಡಿದ್ದೇವೆ ಎಂದು ತಿಳಿಸಿದ್ದರ ಮೇರೆಗೆ ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಿಸಿದ ವ್ಯಕ್ತಿಗಳಲ್ಲಿ ಇವರು ಇಬ್ಬರು ಎಂದು ನಾನು ಗುರುತಿಸಿದ್ದು, ಅವರಿಂದ ಕಬ್ಬಿಣದ ರಾಡ್ ನ್ನು ಅಮಾನತ್ತು ಪಡಿಸಿಕೊಂಡಿದ್ದನ್ನು ನೋಡಿದ್ದು ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಆ ಇಬ್ಬರು ಆರೋಪಿಗಳು ಶಿವು ಮತ್ತು ಇನ್ನೊಬ್ಬ ವ್ಯಕ್ತಿ ಆಗಿರುತ್ತಾನೆ.

ಜೂನ್ ತಿಂಗಳ **2016** ರಂದು ಈ ಕೇಸ್ ನ ಇನ್ನೊಬ್ಬ ಆರೋಪಿ ಮಂಜು ಎಂಬಾತನು ನ್ಯಾಯಾಲಯದಿಂದ ಜಾಮೀನು ಪಡೆದು ಸೊರಬ ಠಾಣೆಯಲ್ಲಿ ಹಾಜರಾಗಿದ್ದಾನೆ ಎಂದು ತಿಳಿಸಿದ ಮೇರೆಗೆ ಅಲ್ಲಿ ಹೋಗಿ ನೋಡಿ, ಆ ವ್ಯಕ್ತಿಯು ಆರೋಪಿ ಮಂಜು ಯಾನೆ ಮಂಜ ಎಂದು ಗುರುತಿಸಿದ್ದು ನನ್ನ ಮರುಹೇಳಿಕೆ ನೀಡಿರುತ್ತೇನೆ.

(ಈಗ ನ್ಯಾಯಾಲಯದ ಮುಂದೆ ಅಮಾನತ್ತು ಮಹಜರ್ ಕಾಲಕ್ಕೆ ಜಪ್ತಿ ಮಾಡಿದ **01** ಸ್ವತ್ತುನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ, ಸೀಲು ಹಾಕಿದ್ದನ್ನು, ತೆರೆದ ನ್ಯಾಯಾಲಯದಲ್ಲಿ ಸೀಲನ್ನು ಬಿಚ್ಚಿ ನೋಡಲು ಸರಕಾರಿ ಅಭಿಯೋಜಕರು ಅನುಮತಿ ಕೋರಿದ್ದು,ಅನುಮತಿ ನೀಡಲಾಯಿತು. ಅದರಂತೆ ಸದರಿ ಸ್ವತ್ತಿನ ಸೀಲ್ ಬಿಚ್ಚಿ ತೆರೆಯಲಾಯಿತು.)

ಸೊರಬ ಠಾಣೆಯ ತನಿಖಾಧಿಕಾರಿಯು ಅಮಾನತ್ತು ಮಾಡಿದ ನನ್ನ ಪಿಸ್ತೂಲ್ ನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ಮು.ಮಾ.**1** ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ **9** ಇಂಚಿನ ಲೂನಾರ್

ಚಪ್ಪಲಿಯನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಈಗ ತೋಳು ಅಳತೆಯ ನಾಲ್ಕು ಕಾಡುಜಾತಿಯ ದೊಣ್ಣೆಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅವುಗಳನ್ನು ಮು.ಮಾ.3 ರಿಂದ 6 ಎಂದು ಗುರುತಿಸಲಾಯಿತು. ನಾಲ್ಕು ಹಿಡಿ ಗಾತ್ರದ ಕಲ್ಲುಗಳನ್ನು ಮುಮಾ.7 ರಿಂದ 10 ಎಂದು ಗುರುತಿಸಲಾಯಿತು.

(ಈಗ ನ್ಯಾಯಾಲಯದ ಮುಂದೆ ಮಹಜರ್ ಕಾಲಕ್ಕೆ ಜಪ್ತಿ ಮಾಡಿದ 01 ಸ್ವತ್ತುನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ, ಸೀಲು ಹಾಕಿದ್ದನ್ನು, ತೆರೆದ ನ್ಯಾಯಾಲಯದಲ್ಲಿ ಸೀಲನ್ನು ಬಿಚ್ಚಿ ನೋಡಲು ಸರಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು. ಅದರಂತೆ ಸದರಿ ಸ್ವತ್ತಿನ ಸೀಲ್ ಬಿಚ್ಚಿ ತೆರೆಯಲಾಯಿತು.)

ಸದರಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ಎರಡು ಖಾಲಿಕೋಕ್ಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅವುಗಳನ್ನು ಒಟ್ಟಾಗಿ ಮು.ಮಾ.11 ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಉಪಯೋಗಿಸಿದ್ದ ಎರಡು ಅಡಿ ಉದ್ದದ 12 ಎಂಎಂ ಕಬ್ಬಿಣದ ರಾಡ್ ನ್ನು ಮು.ಮಾ.12 ಎಂದು ಗುರುತಿಸಲಾಯಿತು. ಈಗ ನಾನು ಕಪ್ಪು ಬಣ್ಣದ ಸ್ಯಾಮ್ ಸಂಗ್ ಮೊಬೈಲ್ ನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ಮು.ಮಾ.13 ಎಂದು ಗುರುತಿಸಲಾಯಿತು. ಐಎಸ್ಐ. ಎಂದು ಆಂಗ್ಲ ಬಾಷೆಯಲ್ಲಿ ಬರೆದಿರುವ ಕಬ್ಬಿಣದ ರಾಡ್ ನ್ನು ಮು.ಮಾ.14 ಎಂದು ಗುರುತಿಸಲಾಯಿತು. ತನಿಖಾಧಿಕಾರಿಯು ತೋರಿಸಿದ ಕಿರುಬೆರಳು ಗಾತ್ರದ ಸುಮಾರು ಎರಡು ಅಡಿ ಉದ್ದದ ಎರಡು ಕಬ್ಬಿಣದ ರಾಡ್‌ಗಳನ್ನು ಮುಮಾ.15 ಮತ್ತು 16 ಎಂದು ಗುರುತಿಸಲಾಯಿತು.

ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿ, ಕೊಲೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಗುರುತಿಸುತ್ತೇನೆ.

<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ.ಕೆಕೆಎಸ್.ವಕೀಲರಿಂದಃ</u>

ದಿಃ 01-03-2016 ರಂದು ನನಗೆ ನಮ್ಮ ಎಸ್.ಪಿ.ಯವರಿಂದ ಆದೇಶ ಬಂದಿರುತ್ತದೆ. ಅವರು ಅದೇ ದಿನ ಬಳಿಗ್ಗೆ 8.30 ಗಂಟೆ ಸಮಯದಲ್ಲಿ ನನಗೆ ದೂರವಾಣಿ ಕರೆ ಮಾಡಿರುತ್ತಾರೆ. ಮಾನ್ಯ ಎಸ್.ಪಿ.ಯವರು ನೀಡಿದ ಲಿಖಿತ ಆದೇಶವನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿಃ 01-03-2016 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಬಸವನಹಳ್ಳಿ ಠಾಣೆಯಲ್ಲಿ ಪಿರ್ಯಾದು ದಾಖಲಾಗಿರುತ್ತದೆ. ನಾವು ಮೊಕದ್ದಮೆ ಸಂಃ 60/2016 ರಲ್ಲಿ ಪಿರ್ಯಾದುದಾರನ ಮೊಬೈಲನ್ನು ಆ ದಿನ ನಾವು ತೆಗೆದುಕೊಂಡು ಬಂದಿದ್ದೆವು. ನಾವು ಆ ದಿನ ಬೆಳಿಗ್ಗೆ 10.00 ಗಂಟೆಗೆ ಅಜ್ಜಂಪುರ ಠಾಣೆಯಿಂದ ಹೊರಟಿರುತ್ತೇವೆ. ಆ ದಿನ ನಾವು ಸಮವಸ್ತ್ರದಲ್ಲಿ ಇರಲಿಲ್ಲ. ಆ ದಿನ ಪ್ರಯಾಣ ಮಾಡುತ್ತಿದ್ದ ಡಸ್ಟರ್ ಕಾರು ಚಾಲಕ ಸೇರಿ 6 ಜನ ಪ್ರಯಾಣ ಮಾಡಬಹುದು. ಅಜ್ಜಂಪುರದಿಂದ ಶಿರಾಳಕೊಪ್ಪಕ್ಕೆ 135 ಕಿಮೀ ಇದೆ. ಅಜ್ಜಂಪುರದಿಂದ ನಾವು ತರಿಕೆರೆ, ಭದ್ರಾವತಿ, ಶಿವಮೊಗ್ಗ ಮಾರ್ಗವಾಗಿ ಶಿರಾಳಕೊಪ್ಪಕ್ಕೆ ಬಂದಿರುತ್ತೇವೆ. ನಾವು ಆ ದಿನ ಶಿರಾಳಕೊಪ್ಪ ತಲುಪಲು ನಾಲ್ಕು ಗಂಟೆ ಸಮಯ ಬೇಕಾಗುತ್ತಿತ್ತು. ನಮಗೆ ಪಿರ್ಯಾದುದಾರ ಅನುಮಾನಸ್ಪದ ವ್ಯಕ್ತಿ ರಮೇಶ ಎಂದು ಹೆಸರು ಕೊಟ್ಟಿದ್ದರು ಆದರೆ ಆ ಹೆಸರನ್ನು ಸುಳ್ಳು ಹೆಸರು ಕೊಟ್ಟಿದ್ದರು.

ಶಿರಾಳಕೊಪ್ಪದಿಂದ ಘಟನಾ ಸ್ಥಳಕ್ಕೆ ಅಂದಾಜು ಸುಮಾರು ಮೂರು ಕಿಮೀ ದೂರದಲ್ಲಿದೆ. ಪೋಲಿಸ್ ಠಾಣೆಗಳು ಶಿರಾಳಕೊಪ್ಪ ಮತ್ತು ಸೊರಬದಲ್ಲಿ ಇವೆ ಎಂದರೆ ಸರಿ. ನಾವು ಆ ಸ್ಥಳಕ್ಕೆ ಬರುವ ಮೊದಲು ಹತ್ತಿರದ ಪೋಲಿಸ್ ಠಾಣೆಗೆ ಆ ಸಮಯದಲ್ಲಿ ನಾವು ಯಾವುದೇ ಮಾಹಿತಿ ನೀಡಿರಲಿಲ್ಲ. ಘಟನಾ ಸ್ಥಳ ಶಿರಾಳಕೊಪ್ಪ ಮತ್ತು ಸೊರಬಕ್ಕೆ ಹೋಗುವ ರಸ್ತೆಯ ಮಧ್ಯೆದಲ್ಲಿದೆ ಎಂದರೆ ಸರಿ. ಘಟನಾ ಸ್ಥಳವು ರಸ್ತೆಯಿಂದ ಸ್ವಲ್ಪ ಇಳಿಜಾರಿನಲ್ಲಿದೆ ಎಂದರೆ ಪ್ರಾರಂಭದಲ್ಲಿ ಸ್ವಲ್ಪ ಇಳಿಜಾರು ಇದ್ದು ನಂತರ ಗಿಡಗಂಟಿಗಳು ಬೆಳೆದಿವೆ ಎಂದು ನುಡಿದಿದ್ದಾರೆ. ಘಟನಾ ಸ್ಥಳದ ಪಕ್ಕದಲ್ಲಿ ಚತ್ರದ ಹಳ್ಳಿ ಇದೆ ಎಂದರೆ ಚತ್ರದ ಹಳ್ಳಿಯ ಬೋರ್ಡ ನೊಡಿದ್ದೇನೆ ಆದರೆ ಹಳ್ಳಿ ನೊಡಿಲ್ಲ ಎಂದು ನುಡಿದಿದ್ದಾರೆ. ಆ ಗ್ರಾಮದಲ್ಲಿ ಸುಮಾರು 400 ಮನೆಗಳು ಇವೆ ಎಂದರೆ ಇರಬಹುದು.

ಸದರಿ ಘಟನಾ ಸ್ಥಳದಲ್ಲಿ ಕೆರೆ ಒಣಗಿದ್ದರಿಂದ ಅದರಲ್ಲಿ ಚಪ್ಪಲಿ ಮತ್ತು ಇತರೆ ಬಿಸಾಡುವ ವಸ್ತುಗಳು ಅಲ್ಲಿ ಬಿಸಾಡಿರುತ್ತಾರೆ ಎಂದರೆ ಆ ಸ್ಥಳದಲ್ಲಿ ಆ ಸಮಯದಲ್ಲಿ ಯಾವುದೇ ವಸ್ತುಗಳು ಬಿಸಾಡಿರಲಿಲ್ಲ ಎಂದು ನುಡಿದಿದ್ದಾರೆ. ಸದರಿ ಸ್ಥಳದಲ್ಲಿ ಕಸ ಇರಲಿಲ್ಲ ಆದರೆ ಗಿಡಗಂಟಿಗಳು ಬೆಳೆದುಕೊಂಡಿದ್ದವು. ಗಿಡ ಗಂಟಿಗಳು ಬೆಳೆದಿದ್ದ ಕೆರಯ ಅಂಗಳದಿಂದ ನಮ್ಮ ವಾಹನ ಇದ್ದ ಸ್ಥಳ ಸುಮಾರು 200 ಅಡಿ ದೂರದಲ್ಲಿರಬಹುದು. ನಮ್ಮ ವಾಹನವನ್ನು ನಿಲ್ಲಿಸಿದ ಜಾಗದ ಚಕ್ಕುಬಂದಿ ನನಗೆ ಹೇಳಲು ಆಗುತ್ತದೆ. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಕೃತ್ಯ ನಡೆದ ಸ್ಥಳ,ಉತ್ತರ ಮತ್ತು ದಕ್ಷಿಣಕ್ಕೆ ಶಿರಾಳಕೊಪ್ಪ ಸಾಗರ ರಸ್ತೆ ಇದೆ.

ಘಟನಾ ಸ್ಥಳಕ್ಕೆ ನಾನು ಮತ್ತು ನನ್ನ ನಾಲ್ಕು ಜನ ಸಿಬ್ಬಂದಿಗಳು ಒಟ್ಟಾಗಿ ಹೋಗಿರುತ್ತೇವೆ. ಮು.ಮಾ.3 ರಿಂದ 6 ರಂತಹ ದೊಣ್ಣೆಗಳು ಕೆರೆ ಅಂಗಳದಲಲ್ಲಿ ಕೆರೆ ಒಣಗಿದ್ದರಿಂದ ಅವು ಅಲ್ಲಿ ಬಿದ್ದಿದ್ದವು ಎಂದರೆ ಸರಿಯಲ್ಲ. ಘಟನಾ ಸ್ಥಳವು ಚತ್ರದ ಹಳ್ಳಿಯ ಬೋರ್ಡ ನಿಂದ ಸುಮಾರು 150 ಅಡಿ ಅಂತರದಲ್ಲಿತ್ತು. ನಾನು ಆರೋಪಿತರ ಎಲ್ಲರ ಹೆಸರು ಹೇಳುತ್ತೇನೆ. ಆ ಹೆಸರಿನ ಆರೋಪಿ ಇದೇ ಆರೋಪಿ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಆರೋಪಿತರ ಹೆಸರನ್ನು ತನಿಖಾಧಿಕಾರಿಯುಅವರನ್ನು ದಸ್ತಗಿರಿ ಮಾಡಿದಾಗ ಠಾಣೆಯಲ್ಲಿ ತಿಳಿಸಿರುತ್ತಾರೆ.

ನಾವು ಆ ದಿನ ನಮ್ಮ ವಾಹನ ನಿಲ್ಲಿಸಿದ ಜಾಗ ಶಿರಾಳಕೊಪ್ಪ ಸಾಗರ ಸೊರಬಕ್ಕೆ ಹೋಗುವ ರಸ್ತೆಯಾಗಿದ್ದು ಅಲ್ಲಿ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮು.ಮ್ಹಾ. 3 ರಿಂದ 16 ರಿಂದ ಆ ದಿನ ನನಗೆ ಮತ್ತು ನಮ್ಮ ಸಿಬ್ಬಂದಿಗೆ ಆರೋಪಿತರು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ಯಾರು ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಈ ಘಟನೆ ಆಯಿತು ಎಂದು ಹೇಳುವ ಸಮಯದಲ್ಲಿ ನಾನು ಹೊಸದಾಗಿ ಕರ್ತವ್ಯಕ್ಕೆ ಸೇರಿದ್ದು ಮತ್ತು ಚಿಕ್ಕಮಗಳೂರಿನ ಕಲಂಃ 420 ಭಾ.ದ.ಸಂ. ಅಡಿ ದಾಖಲಾಗಿದ್ದ ಪಿರ್ಯಾದು ಆಗಿದ್ದರಿಂದ ಅದರ ಬಗ್ಗೆ ತನಿಖೆ ಮಾಡುವ ಹುಮ್ಮಸ್ಸಿನಲ್ಲಿದ್ದು ನಮಗೆ ಆ ಸಮಯದಲ್ಲಿ ಆ ತನಿಖೆಗೆ ಸಂಬಂಧಿಸಿದ ಆರೋಪಿ

ಸಿಗದಿದ್ದರಿಂದ ಸೊರಬ ಠಾಣಾಧಿಕಾರಿಯ ಮಾತು ಕೇಳಿ ನಾನು ಆರೋಪಿಗಳಿಂದ ಈ ಘಟನೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನೆ ಸಮಯದಲ್ಲಿ ನಾವು ಪೋಲಿಸರು ಎಂದು ಹೇಳುತ್ತಿದ್ದರಿಂದ ಆರೋಪಿತರು ಕೇಳದೇ ನಮ್ಮನ್ನು ಹೊಡೆದು ನಮ್ಮನ್ನು ಕೊಲೆ ಮಾಡಲು ಪ್ರಯತ್ನಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆ ಮುಕ್ತಾಯವಾದಾಗ ಸಂಜೆ 5.30 ಗಂಟೆ ಆಗಿತ್ತು. ಸಾಮಾನ್ಯವಾಗಿ ನಾವು ಗಾಳಿಯಲ್ಲಿ ಗುಂಡು ಹಾರಿಸಿದಾಗ ಅದರ ಶಬ್ದ ಸಾಕಷ್ಟು ದೂರ ಕೇಳಿಸುತ್ತದೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಬಹಳ ಹತ್ತಿರಕ್ಕೆ ಚತ್ರದ ಹಳ್ಳಿ ಇದ್ದು, ನಾವು ಗುಂಡು ಹಾರಿಸಿದ್ದರಿಂದ ಅದು ಆ ಹಳ್ಳಿಯ ಗ್ರಾಮಸ್ಥರಿಗೆ ಮತ್ತು ಘಟನಾ ಸ್ಥಳದಲ್ಲಿರುವ ತೋಟದಲ್ಲಿರುವ ಮನೆಯವರಿಗೆ ಕೇಳಿಸುವುದರಿಂದ ಆ ಸ್ಥಳಕ್ಕೆ ಸಾಕಷ್ಟು ಜನ ಬಂದು ಸೇರಿರುತ್ತಿದ್ದರು ಎಂದರೆ ಸಾಕ್ಷಿ ಸ್ವಲ್ಪ ಜನ ಬಂದು ಸೇರಿದ್ದರು, ಅವರಲ್ಲಿ ಹಬೀಬ್ ಮತ್ತು ರಮೇಶ್ ಇಬ್ಬರು ಮಾತ್ರ ಸಾಕ್ಷಿ ನುಡಿಯಲು ಬಂದಿದ್ದು ಉಳಿದವರು ಯಾರು ನಮ್ಮ ಸಹಾಯಕ್ಕೆ ಬಂದಿರುವುದಿಲ್ಲ.

ನಮಗೆ ಇಲಾಖೆಯಿಂದ ಕೊಡುವ ಪಿಸ್ತೂಲ್ ನಲ್ಲಿ ನಾವು ಸಾಮಾನ್ಯವಾಗಿ 10 ಸುತ್ತು ಗುಂಡು ಹಾರಿಸುವಷ್ಟು ಗುಂಡುಗಳನ್ನು ಆ ಪಿಸ್ತೂಲ್ ನಲ್ಲಿ ಹಾಕಬಹುದಾಗಿರುತ್ತದೆ. ನಾವು ಈ ಬಗ್ಗೆ ತರಬೇತಿ ಸಹ ಪಡೆದಿರುತ್ತೇವೆ ಎಂದರೆ ಸರಿ. ನಾನು ಆ ಸಮಯದಲ್ಲಿ ಗುಂಡನ್ನು ನಾನು ಓರೆಯಾಗಿ ಅಂದರೆ 45 ಡಿಗ್ರಿ ಕೋನದಲ್ಲಿ ಹೊಡೆದಿರುತ್ತೇನೆ. ಸಾಮಾನ್ಯವಾಗಿ ನಾವು ಗುಂಡು ಹಾರಿಸಿದಾಗ ಖಾಲಿ ಕೇಸ್ ಗಳು ನಾವು ನಿಂತಿದ್ದ ಸ್ಥಳದಲ್ಲಿ ಬೀಳುತ್ತವೆ ಮತ್ತು ಗುಂಡುಗಳು ಮಾತ್ರ ದೂರದಲ್ಲಿ ಬೀಳುತ್ತವೆ ಅದು ಆ ಸಮಯದಲ್ಲಿ ಬೀಸುವ ಗಾಳಿಯ ಮೇಲೆ ಅವಲಂಬನೆಯಾಗಿರುತ್ತದೆ.

ನಾನು ನಮ್ಮ ಮಾನ್ಯ ಎಸ್.ಪಿ.ಯವರ ಪ್ರಶಂಸೆ ಪಡೆಯುವ ಉದ್ದೇಶಕ್ಕಾಗಿ ಸದರಿ ಪಿಸ್ತೂಲ್ ನಿಂದ ನೆಲಕ್ಕೆ ಗುಂಡುಹೊಡೆದಿದ್ದು ನಾನು ಮೇಲೆ ಹೇಳುವಂತೆ ಆರೋಪಿತರಿಂದ ತಪ್ಪಿಸಿಕೊಳ್ಳಲು ಮತ್ತು ನನ್ನನ್ನು ರಕ್ಷಿಸಿಕೊಳ್ಳಲು ಗುಂಡು ಹಾರಿಸಿಲ್ಲ ಎಂದರೆ ಸರಿಯಲ್ಲ. ಸದರಿ ನಾವು ಹೇಳುವಂತೆ ಘಟನಾ ಸ್ಥಳದಲ್ಲಿ ಯಾವುದೇ ಆರೋಪಿತರು ಇರಲಿಲ್ಲ, ಆ ಕೆರೆ ಅಂಗಳದಲ್ಲಿದ್ದ ಮುಳ್ಳು ಗಂಟಿಗಳು ನಮಗೆ ತರಚಿದ್ದರಿಂದ

ಗಾಯಗಳಾಗಿದ್ದು, ಆರೋಪಿತರಿಂದ ನಮಗೆ ಯಾವುದೇ ಗಾಯಗಳಾಗಿಲ್ಲ ಮತ್ತು ಹಲ್ಲೆಯಾಗಿಲ್ಲ ಎಂದರೆ ಸರಿಯಲ್ಲ.

ಘಟನಾ ಸಮಯದಲ್ಲಿ ಆರೋಪಿತರು ಯಾರುಯಾರು ಯಾವ್ಯಾವ ಬಣ್ಣದ ಬಟ್ಟಗಳು ಹಾಕಿದ್ದರು ಎಂದು ನಾನು ಗಮನಿಸಿಲ್ಲ ಆದರೆ ಆರೋಪಿತರ ಚಹರೆಯನ್ನು ಒಟ್ಟಾರೆಯಾಗಿ ಗುರುತಿಸಬಹುದು. ನಾನು ನನ್ನ ಪಿರ್ಯಾದಿನಲ್ಲಿ ಆರೋಪಿತರ ಚಹರೆಯನ್ನು ಹೇಳಿಲ್ಲ ಆದರೆ ಒಟ್ಟಾಗಿ ಸುಮಾರು 5 ರಿಂದ 8 ಜನ ಇದ್ದರು ಎಂದು ಹೇಳಿರುತ್ತೇನೆ. ಸಾಮಾನ್ಯವಾಗಿ ನಾವು ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದ ತಕ್ಷಣ ನಮ್ಮ ಎದುರಿಗೆ ಇರುವ ವ್ಯಕ್ತಿಗಳು ಇನ್ನೊಂದು ಬಾರಿ ಗುಂಡು ಹಾರಿಸಿದರೆ ಅವರು ತಮ್ಮ ಪ್ರಾಣ ಭಯದಿಂದ ಓಡಿಹೋಗುತ್ತಿದ್ದು ನಾನು ಹೇಳುವಂತೆ ನಾನು 4 ಸುತ್ತು ಗುಂಡು ಹಾರಿಸಿಲ್ಲ ಎಂದರೆ ಸರಿಯಲ್ಲ. ಘಟನೆಯಾದನಂತರ ಸುಮಾರು ಸಾಯಂಕಾಲ 5.30 – 6.00 ಗಂಟೆಯೊಳಗೆ ನಮ್ಮ ಎಸ್.ಪಿ.ಯವರಿಗೆ ದೂರವಾಣಿ ಮಾಡಿ ವಿಷಯ ತಿಳಿಸಿದೆ.

ನನ್ನ ಪಿರ್ಯಾದನ್ನು ನಾನು ಬೆರಳಚ್ಚು ಮಾಡಿಸಿರುತ್ತೇನೆ. ನಾನು ಬೆರಳಚ್ಚು ಶಾಪ್ ನಲ್ಲಿ ಬೆರಳಚ್ಚು ಮಾಡಿಸಿ ಪಿರ್ಯಾದು ತೆಗೆದುಕೊಂಡು ಸೊರಬ ಠಾಣೆಗೆ ಹೋಗಿರುತ್ತೇನೆ. ಆರೋಪಿತರು ನಾನು ಹೇಳುವಂತೆ ನನ್ನ ಕೆಲಸಕ್ಕೆ ಅವರು ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ಘಟನೆಯಲ್ಲಿ ಆಗಿರುವ ಗಾಯಗಳು ನನಗೆ ಸಾದಾ ಸ್ವರುಪದ ಗಾಯಗಳು ಎಂರೆ ಸರಿ. ಆದರೆ ನಾನು ಗಾಳಿಯಲ್ಲಿ ಗುಂಡು ಹೊಡಯದಿದ್ದರೆ ನನ್ನ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇತ್ತು ಎಂದು ನುಡಿದಿದ್ದಾರೆ. ಮು.ಮಾ.3 ರಿಂದ 6 ಗೊಬ್ಬರದ ಟೊಳ್ಳು ಕಟ್ಟಿಗೆಗಳು ಎಂದರೆ ಸಾಕ್ಷಿ ಅದು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಗಳಾಗಿದ್ದು ಅದು ಗಟ್ಟಿಯಾಗಿವೆ ಎಂದು ನುಡಿದಿದ್ದಾರೆ.

ನಾನು ಹೇಳುವಂತೆ ಮು.ಮಾ. 12 ಮತ್ತು 14 ರಿಂದ 16 ಅವುಗಳು ಸೊರಬ ಠಾಣೆಯಲ್ಲಿ ಅನಾಮದೇಯ ವಸ್ತುಗಳಾಗಿದ್ದು ನಾನು ಹೇಳುವಂತೆ ವಸ್ತುಗಳನ್ನು ತನಿಖಾಧಿಕಾರಿಯು ಘಟನಾ ಸ್ಥಳ ಅಥವಾ ಆರೋಪಿತರಿಂದ ವಶಪಡಿಸಿಕೊಂಡ ವಸ್ತುಗಳು ಅಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿತರನ್ನು ಸ್ವತಃ ಗುರುತಿಸಿಲ್ಲ ಮತ್ತು ಸೊರಬ ಠಾಣೆಯ ಪೋಲಿಸ್ ಅಧಿಕಾರಿಯು ಹೇಳಿದ್ದರಿಂದ ಅವರನ್ನು ಆರೋಪಿಗಳನ್ನು ನಾನು ಗುರುತಿಸಿದ್ದೇನೆ ಎಂದು ಹೇಳುವುದು ಸರಿಯಲ್ಲ. ಆರೋಪಿತರನ್ನು ನಾನು ಗುರುತಿಸಿದ್ದು, ಆರೋಪಿತರ ಹೆಸರನ್ನು ಪೋಲಿಸ್ ಅಧಿಕಾರಿಯು ತಿಳಿಸಿರುತ್ತಾರೆ. ನಾನು ನಿಪಿ-4ರಲ್ಲಿ ನಮಗೆ ಸರಿಹೊಂದುವಂತೆ ತಯಾರಿಸಿದ್ದು ನಾವು ಹೇಳುತ್ತಿರುವ ಘಟನಾ ಸ್ಥಳದ ಅಕ್ಕಪಕ್ಕದಲ್ಲಿದ್ದ ಚತ್ರದ ಹಳ್ಳಿ ಗ್ರಾಮ ತೋಟ ಮತ್ತು ಅದರಲ್ಲಿನ ಮನೆಯನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ.

ಮು.ಮಾ.12 ಮತ್ತು 14 ರಿಂದ 16 ಸೊರಬ ಠಾಣೆಯ ಕಟ್ಟಡ ಕಾಮಗಾರಿ ಕೆಲಸ ನಡೆಯುತ್ತಿದ್ದು ಅವುಗಳಲ್ಲಿ ತ್ಯಾಜ್ಯವಸ್ತುಗಳಾಗಿದ್ದು ಅವುಗಳು ಈ ಘಟನೆಗೆ ಸಂಬಂಧಿಸಿದೆ ಎಂದು ಹೇಳಿ ಈ ಘಟನೆಯಲ್ಲಿ ಅವುಗಳನ್ನು ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ.

ಮು.ಮಾಃ 13 ರಿಂದ ನಾವು ಆರೋಪಿತರನ್ನು ಶೋಧನೆ ಮಾಡುತ್ತಾ ಬಂದಿದ್ದ ಬಗ್ಗೆ ನಾವು ಆ ಸಮಯದಲ್ಲಿ ಮಾಡಿದ ಮೊಬೈಲ್ ಕರೆಗಳ ವಿವರಗಳ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ. ಸೊರಬ ಠಾಣೆಯಲ್ಲಿ ಅಧಿಕಾರಿಯು ಆರೋಪಿ ನಂಃ 1 ರಿಂದ 4ರವರನ್ನು ಯಾವುದೇ ವಿಚಾರಣೆಯ ಸಂಬಂಧ ಠಾಣೆಗೆ ಕರೆದಿದ್ದು ಅವರು ಠಾಣೆಗೆ ಹೋದಾಗ ಅವರನ್ನು ಈ ಘಟನೆಯಲ್ಲಿ ಆರೋಪಿತರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರನ್ನು ಆನವಟ್ಟಿ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಹಿಂದೆ ಆಗಿದ್ದ ಕಲಂಃ 420 ಭಾ.ದಂ.ಸಂ. ಪ್ರಕರಣದಲ್ಲಿ ಅನುಮಾನಸ್ಪದವಾಗಿ ವಿಚಾರಣೆ ಮಾಡಲು ಆರೋಪಿತರನ್ನು ಆ ದಿನ ಠಾಣೆಗೆ ಕರೆದಿದ್ದರು ಎಂದರೆ ಸರಿಯಲ್ಲ.

ಮೊಕದ್ದಮೆ ಸಂಃ 60/2016ರಲ್ಲಿನ ಪಿರ್ಯಾದುದಾರ ಪತ್ರಿಕಾ ವರದಿಗಾರ ಎಂದರೆ ಸರಿ. ಆದರೆ ಅವರು ಅಜ್ಜಪುರದವರಲ್ಲ, ಮೂಡಿಗೆರೆಯವರು ಎಂದು ನುಡಿದಿದ್ದಾರೆ. ಆರೋಪಿತರಿಗೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ನಾನು ನಮ್ಮಇಲಾಖೆಯಿಂದ ಪದೋನ್ನತಿ ಪಡೆಯಲು ಸಹಾಯವಾಗುತ್ತದೆ ಎನ್ನುವ ಉದ್ದೇಶದಿಂದ ನಾನು, ಸೊರಬ ಠಾಣೆ ಅಧಿಕಾರಿ ಮತ್ತು ನಮ್ಮ ಎಸ್.ಪಿ. ಎಲ್ಲರು ಸೇರಿ ಆರೋಪಿಗಳಂತಹ ಮುಗ್ದ ಜನರನ್ನು ಉಪಯೋಗಿಸಿಕೊಂಡು ಈ ಸುಳ್ಳು ಪ್ರಕರಣ

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ. 2 ರ ತರಹ ಚಪ್ಪಲಿಗಳು ಸಾಮಾನ್ಯವಾಗಿ ಯಾರು ಒಂದು ಚಪ್ಪಲಿ ಬಿಟ್ಟು ಒಂದು ಚಪ್ಪಲಿ ಹಾಕಿಕೊಂಡು ಹೋಗುವುದಿಲ್ಲ ಮತ್ತು ಮು.ಮಾ.2 ಕೆರೆ ಅಂಗಳದಲ್ಲಿ ಬಿದ್ದಿದ್ದನ್ನು ನಾನು ಈ ಪ್ರಕರಣದಲ್ಲಿ ಆರೋಪಿತರಿಗೆ ಸಂಬಂಧಿಸಿದ್ದು ಎಂದು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.7 ರಿಂದ 10 ರಸ್ತೆಯನ್ನು ಮತ್ತು ಕಟ್ಟಡವನ್ನು ನಿರ್ಮಿಸುವಾಗ ಬಳಸುವ ದೊಡ್ಡಕಲ್ಲುಗಳ ಚೂರು ಕಲ್ಲುಗಳಾಗಿದ್ದು ಅವು ಕಾಡುಜಾತಿಯ ಕಲ್ಲುಗಳ ಅಲ್ಲ ಎಂದರೆ ಸರಿಯಲ್ಲ.

ಮೊಕದ್ದಮೆ ಸಂಃ 60/2016 ರಲ್ಲಿ ಆರೋಪಿತರ ವಿರುದ್ಧ ಸದರಿ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ಆರೋಪಿತರ ಪರವಾಗಿ ತಡೆಯಾಜ್ಞೆ ನೀಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತ ಸಂಃ 1 ರಿಂದ 4 ರವರು ಸೊರಬ ಹತ್ತಿರ ಬಿಳುವಾಡಿ ಗ್ರಾಮದ ರೈತಾಪಿ ಜನರು ಆಗಿರುತ್ತಾರೆ ಎಂದರೆ ಇರಬಹುದು ಆದರೆ ಅವರುಗಳು ನಮ್ಮ ಮೇಲೆ ಆ ದಿನ ಹಲ್ಲೆ ಮಾಡಿದ್ದವರಾಗಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದಾರೆ. ಆರೋಪಿಗಳ ಮೇಲೆ ಈ ಪ್ರಕರಣ ಬಿಟ್ಟು ಬೇರೆ ಯಾವುದೇ ಪ್ರಕರಣವಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ-2 ರಂತೆ ಸೊರಬ ಠಾಣೆಯಲ್ಲಿ ಪಂಚರ ಸಮಕ್ಷಮ ಯಾವುದೇ ಅಮಾನತ್ತು ಮಹಜರ್ ಮಾಡಿಲ್ಲ ಮತ್ತು ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಬಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಾನು ಮರುಹೇಳಿಕೆಗಳನ್ನು ಕೊಟ್ಟಿಲ್ಲ, ನಿಪಿ-3 ರಂತೆ ಸ್ಥಳ ಮಹಜರ್ ಜರುಗಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.7 ರಿಂದ 10 ಮತ್ತು 12, 14 ರಿಂದ 16 ನಾವು ಸೊರಬ ಠಾಣೆಯ ಕಟ್ಟಡ ಕಾಮಗಾರಿ ಮಾಡುತ್ತಿದ್ದಾಗ ಉಳಿದ ತ್ಯಾಜ್ಯ ವಸ್ತುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಘಟನಾ ಸಮಯದಲ್ಲಿ ಹಬೀಬ್ ಮತ್ತು ರಮೇಶ್ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 1 ರಿಂದ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6, 12 ಮತ್ತು 14 ರಿಂದ 16 ಅಂದರೆ ನಾಲ್ಕು ದೊಣ್ಣೆಗಳು ಮತ್ತು ನಾಲ್ಕು ರಾಡ್ ಗಳು ಇದ್ದು ಆರೋಪಿತರು 7 ಜನ ಮಾತ್ರ

ಇರುವುದರಿಂದ ಘಟನೆ ಸಮಯದಲ್ಲಿ ಯಾವ ಆರೋಪಿತನ ಕೈ ಎರಡು ಆಯುಧಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಘಟನಾ ಸಮಯದಲ್ಲಿ ಆರೋಪಿತರು ನಮ್ಮಿಂದ 10 ಮೀಟರ್ ಅಂತರದಲ್ಲಿದ್ದರು.

ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ

ಮು.ಮಾ.1 ರಿಂದ ನಾನು ಪ್ರಥಮ ಬಾರಿಗೆ ಘಟನಾ ಸ್ಥಳದಲ್ಲಿ ಒಂದು ಕೋನದಲ್ಲಿ ಗುಂಡು ಹಾರಿಸಿದ್ದು ಅದರ ದಿಕ್ಕು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಮು.ಮಾ.1 ರಲ್ಲಿ ನಾಲ್ಕು ಗುಂಡುಗಳು ಇದ್ದವು. ಮು.ಮಾ. 3 ರಿಂದ 6 ರ ಮೇಲೆ ಯಾವುದೇ ರಕ್ತದ ಕಲೆಗಳು ಇಲ್ಲ ಎಂದರೆ ರಕ್ತದಕಲೆ ಇತ್ತು ಆದರೆ ಅದು ಈಗ ಒಣಗಿಹೋಗಿದೆ. ಮು.ಮಾ.3 ರಿಂದ 6 ರಲ್ಲಿ ಯಾವ ದೊಣ್ಣೆಯ ಮೇಲೆ ರಕ್ತದ ಕಲೆ ಇತ್ತು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಮು.ಮಾ. 12, 14 ರಿಂದ 16 ರ ಮೇಲೆ ಮೇಲೆ ರಕ್ತದ ಕಲೆ ಇಲ್ಲ ಎಂದರೆ ರಕ್ತದ ಕಲೆ ಇದ್ದು ಎಲ್ಲಾ ರಾಡ್ ಗಳ ಮೇಲೆ ಈಗ ಒಣಗಿಹೋಗಿವೆ ಎಂದು ಸಾಕ್ಷಿ ನುಡಿದ್ದಿದಾರೆ. ಮು.ಮಾ. 7 ರಿಂದ 10 ರ ಮೇಲೆ ಯಾವುದೇ ರಕ್ತದ ಕಲೆಗಳು ಇಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳದಿಂದ ನಾವು ಚಿಕಿತ್ಸೆ ಪಡೆದ ಆಸ್ಪತ್ರೆ ನಾಲ್ಕು ಕಿಮೀ ಅಂತರದಲ್ಲಿದೆ. ನಾನು ಚಿಕಿತ್ಸೆ ಪಡೆಯುವಾಗ ವೈದ್ಯರಿಗೆ ಈ ರೀತಿ ನನಗೆ ಈ ಘಟನೆಯಲ್ಲಿ 5 ರಿಂದ 8 ಜನರು ಹಲ್ಲೆ ಮಾಡಿದ್ದರಿಂದ ಗಾಯಗಳಾಗಿವೆ ಎಂದು ಹೇಳಿದ್ದೇನೆ. ನನಗೆ ಆಗಿದ್ದ ಗಾಯಗಳು ಸಾದಾ ಸ್ವರುಾಪದ ತರಚಿದ ಮತ್ತು ಕಲ್ಲಿನಲ್ಲಿ ಹೊಡೆದಾಗ ಕಲ್ಲು ತಾಗಿದ ಗಾಯಗಳು ಎಂದರೆ ಸರಿ. ಮೊಕದ್ದಮೆ ಸಂಃ 60/2016 ರ ಪಿರ್ಯಾದನ್ನು ನಾನು ಅದೇ ದಿನ ಅಂದರೆ ಘಟನೆ ದಿನ ನೋಡಿರುತ್ತೇನೆ. ಮು.ಮಾ. 1 ರಿಂದ 16 ರಮೇಲೆ ಯಾವುದೇ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ.

ಘಟನೆ ದಿನವಾದ ಮಾರನೇ ದಿನ ನಾನು ಠಾಣೆಗೆ ಹೋಗಿದಾಗ ಪಂಚ ಸಾಕ್ಷಿಗಳನ್ನು ನಾವು ಠಾಣೆಗೆ ಹೋದ ನಂತರ ಕರೆಸಿರುತ್ತಾರೆ. ನಾನು ಠಾಣೆಗೆ ಹೋದ ತಕ್ಷಣ ಸಾಕ್ಷಿಗಳು ಬಂದಿರುತ್ತಾರೆ. ಠಾಣೆಗೆ ಮತ್ತು ಪಂಚ ಸಾಕ್ಷಿಗಳ ಗ್ರಾಮಕ್ಕೆ ಸುಮಾರು 20 ಕಿಮೀ ದೂರವಿದೆ ಎಂದರೆ ಅಂದಾಜು ಇರಬಹುದು.

ನಾನು ಹೇಳುವಂತೆ ಆ ದಿನ ಯಾವುದೇ ಅಮಾನತ್ತು ಮಹಜರ್ ನ್ನು ನಿಪಿ-2 ರ ಪ್ರಕಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಸೊರಬ ಠಾಣೆಯ ಬಳಿ ಇರುವ ಟೈಪಿಂಗ್ ಶಾಪ್ ನಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ನಾನು ಹೇಳುವಂತೆ ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಗಾಳಿಯಲಿ ಗುಂಡು ಹಾರಿಸಿದ್ದಲ್ಲಿ ನನಗೆ ನೋವು ಆಗಿ ನಾನು ಚಿಕಿತ್ಸೆ ಪಡೆದುಕೊಂಡು, ನಾನು ಹೇಳುತ್ತಿರುವಂತೆ ನನಗೆ ಆರೋಪಿತರಿಂದ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡದೇ ಇದ್ದರೂ ಸಹ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಯಾವುದೇ ಮರುಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸಾಕ್ಷಿಗಳಾದ ಹಬೀಬ್ ಮತ್ತು ರಮೇಶ ಇದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 29-03-2016 ರಂದು ಆರೋಪಿತರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮು.ಮಾ. 3 ರಿಂದ 10, 12 ಮತ್ತು 14 ರಿಂದ 16 ಯಾವ್ಯಾವ ಆರೋಪಿತರಲ್ಲಿ ಯಾವ್ಯಾವಾ ಆಯುಧ ಇತ್ತು ಎಂದು ನನಗೆ ಹೇಳು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆದರೆ ಆರೋಪಿ ಸುಭಾಷ್ ಮತ್ತು ಶಿವು ಮತ್ತು ಇನ್ನು ಇಬ್ಬರು ಆರೋಪಿತರ ಕೈಯಲ್ಲಿ ಕಬ್ಬಿಣದ ರಾಡ್ ಗಳು ಇತ್ತು. ನಾನು ಈ ವಿಷಯವನ್ನು ನನ್ನ ಮರು ಹೇಳಿಕೆಯಲ್ಲಿ ಸೇರಿಸಿರುತ್ತೇನೆ. ನನಗೆ ಆರೋಪಿತರ ಯಾರ ಹೆಸರು ಗೊತ್ತಿಲ್ಲ ನಾನು ನಮ್ಮ ಪೋಲಿಸರ ಹೇಳಿಕೆಯ ಮೇರೆಗೆ ಆರೋಪಿತರ ಹೆಸರನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ನ್ನು ಪೋಟೋಗ್ರಾಫರ್ ತೆಗೆದಿರಬಹುದು. ಅವುಗಳನ್ನು ತೆಗೆದ ಪೋಟೋಗ್ರಾಫರ್ ಹೆಸರು ನೆನಪಿಲ್ಲ.

ಇತ್ತೀಚಿನ ದಿನಗಳಲ್ಲಿ ಯಾವುದೇ ಪೋಟೋ ತೆಗೆದರೆ ಸಾಮಾನ್ಯವಾಗಿ ಅವುಗಳಲ್ಲಿ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಆ ಕ್ಯಾಮಾರಾದಲ್ಲಿ ಅಳವಡಿಸಿದರೆ ಮಾತ್ರ ಬರುತ್ತದೆ ಎಂದು ನುಡಿದಿದ್ದಾರೆ. ನಿಪಿ-5 ಮತ್ತ 6 ನ್ನು ತೆಗೆದ ದಿನಾಂಕ ಮತ್ತು ಸಮಯ ಕಾಣಿಸುತ್ತಿಲ್ಲ ಎಂದರೆ ನಿಜ. ನಿಪಿ-4 ನ್ನು ತಯಾರಿಸಿದ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ಮು.ಮಾ. 13 ನ್ಯಾಯಾಲಯದ ಮುಂದಿರುವ ಆರೋಪಿತರಲ್ಲಿ ಒಬ್ಬರಿಗೆ ಸೇರಿದ್ದು ಅದು ಯಾವ ಆರೋಪಿತನಿಗೆ ಸಂಬಂಧಿಸಿದ್ದು ಎಂದು ತನಿಖಾಧಿಕಾರಿಯವರು ತನಿಖೆ ಮಾಡಿರುತ್ತಾರೆ. ನಾನು ಹೇಳುವಂತೆ ನಿಪಿ-3 ನ್ನು ಮಾಡುವ ಸಮಯದಲ್ಲಿ ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 5 ರಿಂದ 7 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ 01/2018

ಪಿಡಬ್ಲೂ 02
ಸಿಡಬ್ಲೂ 02

| | | |
|---|---|---|
| ಸಾಕ್ಷಿ ಹೆಸರು | – | ಶೇಷಾದ್ರಿ ಹೆಚ್. |
| ತಂದೆ ಹೆಸರು | – | ಹನುಮಂತಯ್ಯ |
| ವಯಸ್ಸು | – | 38 ವರ್ಷ |
| ಉದ್ಯೋಗ | – | ಹೆಚ್.ಸಿ. ಜಿಲ್ಲಾ ಪೋಲಿಸ್ ಕಛೇರಿ, ಚಿಕ್ಕಮಗಳೂರು |
| ವಿಳಾಸಃ | – | ಚಿಕ್ಕಮಗಳೂರು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 27–07–2018.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು 2003 ನೇ ಇಸವಿಯಿಂದ 2017 ರವರೆಗೆ ಚಿಕ್ಕಮಗಳೂರು ಜಿಲ್ಲಾ ಆರಕ್ಷಕ ಅಧೀಕ್ಷಕರ ಕಛೇರಿಯಲ್ಲಿ ಆರ್.ಡಿ.ಸಿ. ಶಾಖೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01–03–2016 ರಂದು ನನ್ನನ್ನು ಮತ್ತು ಚಾಸಃ 5 ರವರಿಗೆ ಅಜ್ಜಂಪುರ ಪೋಲಿಸ್ ಠಾಣೆಗೆ ಕಳುಹಿಸಿ, ಅಲ್ಲಿದ್ದ ಚಾಸಃ 1 ಮತ್ತು ಆ ದಿನ ಸಿಬ್ಬಂದಿಗಳಾದ ಚಾಸಃ 3 ಮತ್ತು 4 ರವರೊಂದಿಗೆ ಖಾಸಗಿ ವಾಹನದಲ್ಲಿ ಮೊಕದ್ದಮೆ ಸಂಃ 60/2016 ಬಸವನಹಳ್ಳಿ ಠಾಣೆಯ ದೂರಿನಲ್ಲಿದ್ದ ಆರೋಪಿತರ ಪತ್ತೆಗಾಗಿ ಹೋಗಿದ್ದು ಅಜ್ಜಂಪುರ ಪೋಲಿಸ್ ಠಾಣೆಯಿಂದ ಬೆಳಿಗ್ಗೆ 10.00 ಗಂಟೆಗೆ ಹೊರಟು, ಆರೋಪಿತರ ಪತ್ತೆಗಾಗಿ ಪಿರ್ಯಾದಿಯ ಮೊಬೈಲ್ ನಂಬರ್ 9448211028 ನಿಂದ ಆರೋಪಿಗಳ ಮೊಬೈಲ್ ಗೆ ನಾವು ಚಿನ್ನದ ಖರೀದಿಸುವ ಗ್ರಾಹಕರ ಸೋಗಿನಲ್ಲಿ ಕರೆ ಮಾಡಿದ್ದು, ಅವರು ಮೊದಲು ಹಿರೇಕೆರೂರುಗೆ ಬರಲು ತಿಳಿಸಿದ್ದು, ನಂತರ ಶಿರಾಳಕೊಪ್ಪ, ಅಲ್ಲಿಂದ ಚತ್ರದಹಳ್ಳಿಯ ಕೆರೆ ಬಳಿ ಬರಲು ತಿಳಿಸಿದ್ದು, ಆಗ ನಾವು ಸದರಿ ಚತ್ರದ ಹಳ್ಳಿಗೆ ಹೋದಾಗ ಸಮಯ ಮದ್ಯಾಹ್ನ 2.45 ಗಂಟೆ ಆಗಿತ್ತು. ನಾವು ನಮ್ಮ ವಾಹನವನ್ನು ಶಿರಾಳಕೊಪ್ಪ ಸೊರಬದ ಕರೆ ದಡದಲ್ಲಿ ನಿಲ್ಲಿಸಿದೆವು. ನಂತರ

ನಾವು ಪುನಃ ಅವರನ್ನು ಸಂಪರ್ಕಿಸಿದಾಗ ಅವರು ವಾಹನ ನಿಲ್ಲಿಸಿದ್ದ ಸ್ಥಳದಿಂದ ಸುಮಾರು 100 ಮೀಟರ್ ದೂರದಲ್ಲಿ ಕೆರೆಯ ಅಂಗಳಕ್ಕೆ ಬರಲು ತಿಳಿಸಿದರು. ನಾವು ಅದರಂತೆ ಆ ಸ್ಥಳಕ್ಕೆ ತೆರಳಿದಾಗ ನಮ್ಮಲ್ಲಿ ಹಣ ಇರಬಹುದು ಎಂದು ಬಾವಿಸಿ ಕೆರೆ ಅಂಗಳದ ಪೊದೆಯಿಂದ  ಸುಮಾರು ಐದರಿಂದ ಎಂಟು ಜನರು ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಕಲ್ಲು ದೊಣ್ಣೆ ಹಾಗೂ ರಾಡ್ ನಿಂದ ಹಲ್ಲೆ ನಡೆಸಲು ಪ್ರಾರಂಭಿಸಿದರು.

ನಾವು ಪೋಲಿಸರು ನಮಗೆ ಹಲ್ಲೆ ಮಾಡಬೇಡಿ ಎಂದು ತಿಳಿಸಿದರೂ ಸಹ ಅವರೆಲ್ಲಾ ಮಾತನಾಡಿಕೊಂಡು ಇವರನ್ನು ಯಾವುದೇ ಕಾರಣಕ್ಕೂ ಜೀವ ಸಹಿತ ಬಿಡಬಾರದು ಎಂದು ಮಾತನಾಡಿಕೊಂಡು ಮತ್ತೆ ಹಲ್ಲೆ ನಡೆಸಲು ಪ್ರಾರಂಭಿಸಿದರು.  ನಂತರ ಚಾಸಃ1 ತನ್ನ ಪ್ರಾಣ ರಕ್ಷಣೆಗೆ ನಮ್ಮ ಇಲಾಖೆಯವರು ನೀಡಿದ್ದ ಪಿಸ್ತೂಲ್ ನಿಂದ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದರು. ನಂತರ ಪುನಃ ಆರೋಪಿರು ಕಲ್ಲು ದೊಣ್ಣೆಗಳಿಂದ ದಾಳಿ ಮಾಡುವುದು ಬಿಡಲಿಲ್ಲ. ಆದರೂ ದಾಳಿ ನಿಲ್ಲದ ಕಾರಣ ಚಾಸಃ1 ಮತ್ತೆ ನಾಲ್ಕು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿರುತ್ತಾರೆ.  ಇದರ ನಂತರ ಆರೋಪಿತರು ಹೆದರಿ ಓಡಿಹೋಗಿರುತ್ತಾರೆ. ನಂತರ ಮಾನ್ಯ ಎಸ್.ಪಿ. ಚಿಕ್ಕಮಗಳೂರು ಇವರಿಗೆ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿ, ನನಗೆ ಭುಜದ ಮೇಲೆ ಮತ್ತು ಬಲಗೈನ ಹೆಬ್ಬೆರಳಿಗೆ ಗಾಯಗೊಂಡಿದ್ದರಿಂದ ಶಿರಾಳಕೊಪ್ಪದ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆದೆವು.  ಆರೋಪಿತರು ಘಟನೆಯ ಸಮಯದಲ್ಲಿ ನನ್ನ ಮೇಲೆ ಹಲ್ಲೆ ಮಾಡುತ್ತಿರುವಾಗ ಅವರವರು ತಮ್ಮ ತಮ್ಮ ಹೆಸರುಗಳನ್ನ ಕೂಗಿಕೊಂಡು ಹೊಡಿಯಿರಿ ಎಂದು ಹೇಳುತ್ತಿದ್ದಾಗ ನನಗೆ ಆರೋಪಿತರ ಹೆಸರುಗಳು ತಮ್ಮಣ್ಣಿ, ಮಂಜು, ಶಿವು, ಸುಭಾಷ್, ವೆಂಕಟೇಶ್, ನಾಗೇಶ್ ಮತ್ತು ಮಹದೇವ ಎಂದು ಗೊತ್ತಾಗಿರುತ್ತದೆ.

ಆರೋಪಿತರು ನಮ್ಮ ಹಲ್ಲೆ ಮಾಡಲು ಪ್ರಾರಂಭಿಸಿದಾಗ ನಾವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆವು. ನಾವು ಆರೋಪಿತರ ಹಲ್ಲೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದೇ ಇದ್ದಲ್ಲಿ ಅವರ ಹಲ್ಲೆಗೆ ನೇರವಾಗಿ ಸಿಕ್ಕಿದರೆ ನಮ್ಮ ಪ್ರಾಣಕ್ಕೆ ಅಪಾಯವಾಗುವ ಸಂಭವವಿತ್ತು.  ನಾವು ಘಟನಾ ಸ್ಥಳದಿಂದ ವಾಪಾಸು ನಮ್ಮ ವಾಹನದ ಬಳಿ ಬರುವಾಗ ಇಬ್ಬರು ವ್ಯಕ್ತಿಗಳಾದ ಹಬೀಬುಲ್ಲಾ ಮತ್ತು ರಾಮಪ್ಪ ಬಂದಿದ್ದರು.

ನಂತರ ನಾವು ನೇರವಾಗಿ ಸೊರಬ ಠಾಣೆಯ ವ್ಯಾಪ್ತಿಯಲ್ಲಿರುವುದರಿಂದ ಚಾಸಃ1 ರವರು ಒಂದು ಪಿರ್ಯಾದು ತಯಾರಿಸಿ ಕೊಟ್ಟರು. ತನಿಖಾಧಿಕಾರಿಯು ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ.

ದಿಃ **07-03-2016** ರಂದು ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ **4** ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ, ಅವರನ್ನು ಗುರುತಿಸಲು ಕರೆದರು. ಅವರುಗಳ ಹೆಸರು ನಾಗೇಶ, ವೆಂಕಟೇಶ, ಸುಭಾಷ್ ಮತ್ತು ತಮ್ಮಣ್ಣ ಗುರುತಿಸಿದೆವು. ಸುಭಾಷ್ ನ ಸ್ವಾಯಿಚ್ಛಾ ಹೇಳಿಕೆಯನ್ವಯ ವಶಪಡಿಸಿಕೊಂಡ ಕಪ್ಪು ಬಣ್ಣದ ಸಾಮ್ ಸಂಗ್ ಮೊಬೈಲ್ ಗುರುತಿಸಿದೆನು.

ದಿಃ **29-03-2016** ರಂದು ಪುನಃ ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ **2** ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ, ಅವರನ್ನು ಗುರುತಿಸಲು ಕರೆದರು. ಅವರುಗಳು ಮಹಾದೇವ ಮತ್ತು ಶಿವು ಗುರುತಿಸಿದೆವು. ಕೃತ್ಯಕ್ಕೆ ಬಳಸಿದ ರಾಡ್ಗಳು ಗುರುತಿದೆವು. ದಿಃ **19-06-2016** ರಂದು ಪುನಃ ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ ಮಂಜು ಎನ್ನುವ ಆರೋಪಿ ನಿರೀಕ್ಷಣಾ ಜಾಮೀನು ತಂದು ಹಾಜರಾಗಿದ್ದು ಆತನನ್ನು ಗುರುತಿಸಲು ಕರೆದರು. ನಾನು ಆತನನ್ನು ಗುರುತಿಸಿದೆನು. ನಾನು ಆರೋಪಿತರನ್ನು ಗುರುತಿಸಿದ್ದಕ್ಕೆ ತನಿಖಾಧಿಕಾರಿಯು ನನ್ನ ಹೇಳಿಕೆಯನ್ನು ಪಡೆದುಕೊಂಡರು.

ಚಾಸಃ1 ರವರು ಆ ದಿನ ಗಾಳಿಯಲ್ಲಿ ಗುಂಡು ಹಾರಿಸಿದ್ದ ಮು.ಮಾ.1 ಪಿಸ್ತೂಲ್ ನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.3 ರಿಂದ 6 ದೊಣ್ಣೆಗಳು ಮತ್ತು ಮು.ಮಾ. 7 ರಿಂದ 10 ಕಲ್ಲುಗಳು, ಮು.ಮಾ.12, 14 ರಿಂದ 16 ರಾಡ್ ಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಮು.ಮಾ.13 ಮೊಬೈಲನ್ನು ಗುರುತಿಸುತ್ತೇನೆ.

ಆ ದಿನ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿ ನಾವು ಅವರನ್ನು ಠಾಣೆಯಲ್ಲಿ ಗುರುತಿಸಿದ್ದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವರನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ.ಕೆಕೆಎಸ್.ವಕೀಲರಿಂದಃ**

ನಾನು ಮತ್ತು ಚಾಸಃ 5 ಚಿಕ್ಕಮಗಳೂರಿನಿಂದ ಆ ದಿನ ಅಜ್ಜಂಪುರಕ್ಕೆ ಬಂದಾಗ ಬೆಳಿಗ್ಗೆ 9.30- 9. 45 ಗಂಟೆ ಯಾಗಿತ್ತು. ಚಿಕ್ಕಮಗಳೂರಿನಿಂದ ಅಜ್ಜಂಪುರ ಸುಮಾರು 62 ಕಿಮೀ ಅಂತರದಲ್ಲಿದೆ. ನಾನು ಮತ್ತು ಚಾಸಃ 5 ರವರು ಚಿಕ್ಕಮಗಳೂರಿನಿಂದ ಬಸ್ ನಿಂದ ಬಂದಿರುತ್ತೇವೆ. ಚಿಕ್ಕಮಗಳೂರಿನಿಂದ ಅಜ್ಜಂಪುರಕ್ಕೆ ಬರಲು ಕೆಎಸ್ಆರ್ಟಿಸಿ. ಬಸ್ ಎಕ್ಸಪ್ರೆಸ್ ಬಸ್ ಇರುತ್ತದೆ. ನಮಗೆ ನಮ್ಮ ಎಸ್.ಪಿ.ರವರು ಮೊದಲು ಅಜ್ಜಂಪುರಕ್ಕೆ ಚಾಸಃ 1 ರವರನ್ನು ಭೇಟಿ ಮಾಡಲು ಹೇಳಿದ್ದು, ಆ ಸಮಯದಲ್ಲಿ ನಮಗೆ ಲಿಖಿತವಾದ ಆದೇಶ ಕೊಟ್ಟಿರಲಿಲ್ಲ. ಬಸವನಹಳ್ಳಿ ಠಾಣೆಯ ಮೊಕದ್ದಮೆ ಸಂಃ 60/2016 ರಲ್ಲಿ ಪಿರ್ಯಾದನ್ನು ದಿಃ 01-03-2016 ರಂದು ಕೊಟ್ಟಿದ್ದರು. ಆ ದಿನ ಪ್ರಯಾಣ ಮಾಡುತ್ತಿದ್ದ ಡಸ್ಟರ್ ಕಾರು ಚಾಲಕ ಸೇರಿ 6 ಜನ ಪ್ರಯಾಣ ಮಾಡಬಹುದು. ಪಿರ್ಯಾದುದಾರನ ಮೊಬೈಲ್ ನಿಂದ ನಾವು ಆರೋಪಿತರನ್ನು ಸಂಪರ್ಕಿಸಿದಾಗ ಅದು ಯಜಮಾನರು ತಮ್ಮಣ್ಣಿ ಎಂದು ಹೇಳಿದರು. ಅಜ್ಜಂಪುರದಿಂದ ಶಿರಾಳಕೊಪ್ಪಕ್ಕೆ 160 ಕಿಮೀ ಇದೆ. ಅಜ್ಜಂಪುರದಿಂದ ನಾವು ತರಿಕೆರೆ, ಭದ್ರಾವತಿ, ಶಿವಮೊಗ್ಗ ಮಾರ್ಗವಾಗಿ ಶಿರಾಳಕೊಪ್ಪಕ್ಕೆ ಬಂದಿರುತ್ತೇವೆ.

ನಾವು ಆ ದಿನ ಶಿರಾಳಕೊಪ್ಪ ತಲುಪಲು ನಾಲ್ಕು ಗಂಟೆ ಸಮಯ ಬೇಕಾಗುತ್ತಿತ್ತು ಎಂದರೆ ಅಜ್ಜಂಪುರದಿಂದ ಶಿರಾಳಕೊಪ್ಪಗೆ ಬರುವಾಗ ಯಾವುದೇ ಘಾಟ್ ಸೆಕ್ಷನ್ ಇರುವುದಿಲ್ಲ ಎಂದು ನುಡಿದಿದ್ದಾರೆ. ನಾವು ವಾಹನದಲ್ಲಿ ಬರುವಾಗ ಚಾಸಃ 1 ರವರು ಆರೋಪಿತರ ಜೊತೆ ಮೊಬೈಲ್ ಸಂಪರ್ಕದಲ್ಲಿದ್ದರು.

ನಾವು ಶಿರಾಳಕೊಪ್ಪದಿಂದ ಇನ್ನೂ 30 ಕಿಮೀ ದೂರದಲ್ಲಿರುವಾಗಲೇ ಆರೋಪಿತರು ನಮ್ಮನ್ನು ಚತ್ರದ ಹಳ್ಳಿಯ ಕೆರೆ ಬರಲು ಹೇಳಿದರು. ನಾವು ಶಿರಾಳಕೊಪ್ಪಕ್ಕೆ ಬಂದಾಗ ಮದ್ಯಾಹ್ನ 2.30 ಗಂಟೆ ಸಮಯವಾಗಿತ್ತು. ನಾನು ಹೇಳುತ್ತಿರುವ ಚತ್ರದಹಳ್ಳಿ ಕೆರೆ ಸೊರಬಾದಿಂದ ಎರಡು ಕಿಮೀ ಮತ್ತು ಶಿರಾಳಕೊಪ್ಪದಿಂದ ಒಂದು ಕಿಮೀ ಇದೆ ಎಂದರೆ ಸರಿಯಲ್ಲ. ಶಿರಾಳಕೊಪ್ಪದಿಂದ ಘಟನಾ ಸ್ಥಳಕ್ಕೆ ಸುಮಾರು

4 ಕಿಮೀ ಆಗುತ್ತಿದ್ದು ನನಗೆ ಘಟನಾ ಸ್ಥಳದಿಂದ ಸೊರಬಕ್ಕೆ ಎಷ್ಟು ಕಿಮೀ ದೂರವಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳುತ್ತಿರುವ ಘಟನಾ ಸ್ಥಳ ಚತ್ರದ ಹಳ್ಳಿ ಬೋರ್ಡ ಮಾತ್ರ ಇತ್ತು ಅದು ಗ್ರಾಮದ ಬಳಿ ಇರುವುದಿಲ್ಲ. ಆ ಗ್ರಾಮದಲ್ಲಿ ಸುಮಾರು 400 ಮನೆಗಳು ಇವೆ ಎಂದರೆ ಸರಿಯಲ್ಲ. ಕೆರೆಯ ಏರಿಯ ಮನೆಗಳು ಇರುವ ಜಾಗಕ್ಕೆ ಚತ್ರದ ಹಳ್ಳಿ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ ಘಟನಾ ಸ್ಥಳವು ರಸ್ತೆಯಿಂದ ಸ್ವಲ್ಪ ಇಳಿಜಾರಿನಲ್ಲಿದೆ ಎಂದರೆ ಪ್ರಾರಂಭದಲ್ಲಿ ಸ್ವಲ್ಪ ಇಳಿಜಾರು ಇರುತ್ತದೆ ಎಂದರೆ ಸರಿ.

ಘಟನಾ ಸ್ಥಳಕ್ಕೆ ನಾವೆಲ್ಲಾರೂ ಮತ್ತು ಉಳಿದ ಸಿಬ್ಬಂದಿಗಳು ಒಟ್ಟಾಗಿ ಹೋಗಿರುತ್ತೇವೆ. ಘಟನಾ ಸ್ಥಳದಿಂದ ನಮ್ಮ ವಾಹನ ನಿಲ್ಲಿಸಿದ ಜಾಗಕ್ಕೆ 70 ರಿಂದ 100 ಮೀಟರ್ ಅಂತರದಲ್ಲಿದೆ. ಸದರಿ ಕೆರೆಯಲ್ಲಿ ನೀರು ಇರುವುದಿಲ್ಲ ಎನ್ನುವುದು ಸರಿ. ಸದರಿ ಕೆರೆಯಲ್ಲಿ ಕಸಕಡ್ಡಿ , ಪೇಪರ್ ಗಳು ಬಿದ್ದಿರುತ್ತವೆ ಎಂದರೆ ಸರಿಯಲ್ಲ. ಆದರೆ ಸಣ್ಣ ಸಣ್ಣ ಪೊದೆಗಳು ಇವೆ ಎಂದರೆ ಸರಿ. ಸದರಿ ಕೆರೆ ಸ್ವಚ್ಛವಾಗಿರಲಿಲ್ಲ, ಪೊದೆಗಳು ಇದ್ದವು ಮತ್ತು ಕಲ್ಲುಗಳು ಇದ್ದವು.

ಆ ಸಮಯದಲ್ಲಿ ಆರೋಪಿತರು ಯಾವ ದಿಕ್ಕಿನಲ್ಲಿರುವ ಪೊದೆಗಳಿಂದ ಹೊರಬಂದರು ಎಂದು ನನಗೆ ನಿರ್ದಿಷ್ಟವಾಗಿ ಹೇಳು ಆಗುವುದಿಲ್ಲ. ನಮ್ಮ ವಾಹನವನ್ನು ನಿಲ್ಲಿಸಿದ ಜಾಗದ ಚಕ್ಕುಬಂದಿ ನನಗೆ ಹೇಳಲು ಆಗುತ್ತದೆ. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಕೆರೆ ಅಂಗಳ, ಉತ್ತರಕ್ಕೆ ಸೊರಬ ರಸ್ತೆ ಮತ್ತು ದಕ್ಷಿಣಕ್ಕೆ ಶಿರಾಳಕೊಪ್ಪ ಇದೆ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಆರೋಪಿತರು ಆ ಸಮಯದಲ್ಲಿ ಯಾರ್ಯಾರು ದೊಣ್ಣೆ ಮತ್ತು ಯಾರ್ಯಾರು ಕಲ್ಲುಗಳನ್ನು ಹಿಡಿದಿದ್ದರು ಎಂದು ನನಗೆ ನಿಖರವಾಗಿ ಈಗ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ನಮ್ಮಿಂದ ಸುಮಾರು 20 ಅಡಿ ಅಂತರದಲ್ಲಿ ಆರೋಪಿತರು ಇದ್ದರು. ಘಟನಾ ಸಮಯದಲ್ಲಿ ನಾವು ಸಮವಸ್ತ್ರ ಇರಲಿಲ್ಲ, ಸಾಮಾನ್ಯ ಜನರಂತೆ ಬಂಗಾರ ಕೊಂಡುಕೊಳ್ಳುವ ಸೋಗಿನಲ್ಲಿ ಹೋಗಿದ್ದೆವು. ಚಾಸಃ 1 ರವರು ಆ ಸಮಯದಲ್ಲಿ ಗಾಳಿಯಲ್ಲಿ ನೇರವಾಗಿ ಮೇಲಕ್ಕೆ ಗುಂಡು ಹಾರಿಸಿರುತ್ತಾರೆ.

ಸಾಮಾನ್ಯವಾಗಿ ಗುಂಡು ಹಾರಿಸಿದಾಗ ಜೋರಾಗಿ ಶಬ್ದ ಬರುತ್ತದೆ ಎಂದರೆ ಸಾಕ್ಷಿ ಅದು ಕೆರೆ ಅಂಗಳವಾಗಿದ್ದರಿಂದ ಸಾಕಷ್ಟು ಪೊದೆಗಳು ಇದ್ದುದರಿಂದ ಹೆಚ್ಚು ಶಬ್ದ ಬಂದಿಲ್ಲ ಎಂದು ನುಡಿದಿದ್ದಾರೆ. ಸದರಿ ಘಟನೆಯಾದ ಸ್ಥಳದಿಂದ ನಾವು ರಸ್ತೆಗೆ ಬಂದಾಗ ರಾಮಪ್ಪ ಮತ್ತು ಹಬೀಬ ಆ ರಸ್ತೆಗೆ ಬಂದಾಗ ಅವರು ಬಂದಿದ್ದು ಬೇರೆ ಯಾರು ಯಾವುದೇ ಸಾರ್ವಜನಿಕರು ಆ ಸಮಯದಲ್ಲಿ ಬಂದಿರಲಿಲ್ಲ. ಈ ಘಟನೆಯಲ್ಲಿ ನನಗೆ ನನ್ನ ಭುಜ ಮತ್ತು ಬಲಗೈ ಹೆಬ್ಬೆರಳಿಗೆ ಹೊಡೆತ ಬಿದ್ದಿಲ್ಲ ಎಂದರೆ ಸರಿಯಲ್ಲ. ಈ ಘಟನೆಯಲ್ಲಿ ನನಗೆ ನೋವಾದ ಜಾಗದಲ್ಲಿ ರಕ್ತ ಹೆಪ್ಪು ಗಟ್ಟಿತ್ತು, ರಕ್ತಸ್ರಾವ ಆಗಿರಲಿಲ್ಲ. ಘಟನಾ ಸ್ಥಳದಿಂದ ಸೊರಬ ಮತ್ತು ಶಿರಾಳಕೊಪ್ಪ ಎರಡು ಸ್ಥಳಗಳಲ್ಲಿ ಠಾಣೆಗಳು ಇವೆ. ಘಟನಾ ಸ್ಥಳ ಸೊರಬ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ. ನಾವು ಘಟನಾ ಸ್ಥಳಕ್ಕೆ ಬರುವ ಮೊದಲು ಸೊರಬ ಠಾಣೆಗೆ ಯಾವುದೇ ಮಾಹಿತಿ ನೀಡಿರಲಿಲ್ಲ.

ಈ ಘಟನೆ ಆ ದಿನ ಮದ್ಯಾಹ್ನ 3.00 ರಿಂದ 4.30 ಗಂಟೆಯವರೆಗೆ ನಡೆದಿದೆ. ನಾನು ಆ ದಿನ ಆಸ್ಪತ್ರೆಗೆ ಸುಮಾರು 5.50 ರಿಂದ 6.00 ಗಂಟೆ ಸಮಯದಲ್ಲಿ ಹೊರಟ್ಟಿದ್ದು ಆಸ್ಪತ್ರೆ ತಲುಪಿದಾಗ ಸಂಜೆ 6.00 ಗಂಟೆಯಾಗಿತ್ತು. ನಾವು ಚಿಕಿತ್ಸೆ ಪಡೆದ ಆಸ್ಪತ್ರೆಯ ವೈದ್ಯರು ನಮಗೆ ಆ ದಿನ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಎಂದು ಹೇಳಿ ದೃಢೀಕರಣ ಪತ್ರ ಕೊಟ್ಟಿದ್ದಾರೆ ಎಂದರೆ ಇರಬಹುದು. ಚಾಸಃ 1 ರವರು ಗುಂಡು ಹಾರಿಸಿದ ಸಮಯದಲ್ಲಿ ಬಂದೂಕಿನ ಹಿಂದಿನ ಬಾಗ ವಾಪಾಸ್ಸು ಬಂದು ನಂತರ ಮುಂದೆ ಹೋಗಿದೆ ಎಂದರೆ ಸಾಕ್ಷಿ ಅದನ್ನು ನಾನು ಗಮನಿಸಿಲ್ಲ ಎಂದು ನುಡಿದಿದ್ದಾರೆ. ಸಾಮಾನ್ಯವಾಗಿ ಒಂದು ಬಾರಿ ಗುಂಡು ಹಾರಿಸಿದರೆ ಎದುರಿನ ವ್ಯಕ್ತಿ ಓಡಿ ಹೋಗುತ್ತಿದ್ದು ನಾನು ಹೇಳುತ್ತಿರುವಂತೆ ಘಟನಾ ಸಮಯದಲ್ಲಿ ನಾಲ್ಕು ಬಾರಿ ಗುಂಡು ಹಾರಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಃ 1 ರವರು ಹೊಸದಾಗಿ ನೌಕರಿಗೆ ಸೇರಿದ್ದು ಅವರು ನಮ್ಮ ಇಲಾಖೆಯಲ್ಲಿ ಸಾಕಷ್ಟು ಸಾಧನೆ ಮಾಡಬೇಕು ಎಂಬ ಉದ್ದೇಶದಿಂದ ನಾವು ಘಟನೆ ಯಾಯಿತು ಎಂದು ಹೇಳುವ ಸ್ಥಳದಲ್ಲಿ ಯಾರು ಆರೋಪಿತರು ಇಲ್ಲದಿದ್ದು, ಆ ಸಮಯದಲ್ಲಿ ಚಾಸಃ1 ನೆಲಕ್ಕೆ ಗುಂಡು ಹೊಡೆದಿದ್ದು, ನಾವು ಆರೋಪಿಗಳಿಂದ ರಕ್ಷಣೆ ಮಾಡಿಕೊಳ್ಳಲು ಗಾಳಿಯಲ್ಲಿ ನಾಲ್ಕು ಬಾರಿ ಗುಂಡು ಹಾರಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಕಲ್ಲು ಹೊಡೆಯುತ್ತಿದ್ದಸಮಯದಲ್ಲಿ ನಾವು ಕೆರೆ ಅಂಗಳದಲ್ಲಿ ತಪ್ಪಿಸಿಕೊಂಡು ಓಡಾಡುತ್ತಿದ್ದೆವು. ನಾವು ಆದಿನ ಆ ಸ್ಥಳಕ್ಕೆ ಡಸ್ಟರ್ ಕಾರಿನಲ್ಲಿ ಬಂದಿಲ್ಲ, ನನಗೆ ಈ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಘಟನೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 07-03-2016 ರಂದು ನಾವು ಠಾಣೆಯಲ್ಲಿ ಆರೋಪಿತರನ್ನು ಗುರುತಿಸಿರುವ ಬಗ್ಗೆ ಅವರ ಚಹರೆಯನ್ನು ನಾವು ಪೋಲಿಸರಿಗೆ ಹೇಳಿದ್ದು, ಆದರೆ ಅವರು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದು ಹೇಳಿಲ್ಲ. ಈ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿತರನ್ನು ನಾವು ಪಿರ್ಯಾದುದಾರ ಮೊಬೈಲ್ ಮೂಲಕ ಆರೋಪಿತರನ್ನು ಶೋಧನೆ ಮಾಡಿಕೊಂಡು ಬರುತ್ತಿದ್ದನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ, ಆದರೆ ಪೋಲಿಸ್ ಠಾಣೆಗೆ ಮಾಹಿತಿ ನೀಡಿರಲಿಲ್ಲ.

ನಾವು ಹಾಜರುಪಡಿಸಿರುವ ಮು.ಮಾ.12 ಮತ್ತು 14 ರಿಂದ 16 ಸೊರಬ ಠಾಣೆಯ ಕಟ್ಟಡ ಕಾಮಗಾರಿ ಕೆಲಸ ನಡೆಯುತ್ತಿದ್ದು ಅವುಗಳಲ್ಲಿ ತ್ಯಾಜ್ಯವಸ್ತುಗಳಾಗಿದ್ದು ಅವುಗಳು ಈ ಘಟನೆಗೆ ಸಂಬಂಧಿಸಿದೆ ಎಂದು ಹೇಳಿ ಈ ಘಟನೆಯಲ್ಲಿ ಅವುಗಳನ್ನು ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ. ಮು.ಮಾ.3 ರಿಂದ 6 ಗೊಬ್ಬರದ ಟೊಳ್ಳು ಕಟ್ಟಿಗೆಗಳು ಮತ್ತು ಅದರಲ್ಲಿ ಹೊಡೆದರೆ ಆ ಕಟ್ಟಿಗೆ ಗಳು ಮುರಿದು ಹೋಗುತ್ತವೆ ಎಂದರೆ ಸರಿಯಲ್ಲ. ನಾವು ಆ ಸ್ಥಳದಲ್ಲಿ ಬಿದ್ದಿದ್ದ ಕಟ್ಟಿಗೆಗಳನ್ನು ತೆಗೆದುಕೊಂಡು ಬಂದು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ.7 ರಿಂದ 10 ರಸ್ತೆಯನ್ನು ಮತ್ತು ಕಟ್ಟಡವನ್ನು ನಿರ್ಮಿಸುವಾಗ ಬಳಸುವ ದೊಡ್ಡಕಲ್ಲುಗಳ ಚೂರು ಕಲ್ಲುಗಳಾಗಿದ್ದು ಅವು ಕಾಡುಜಾತಿಯ ಕಲ್ಲುಗಳ ಅಲ್ಲ ಎಂದರೆ ಸರಿಯಲ್ಲ.

ದಿಃ 29-03-2016 ಮತ್ತು ದಿಃ 19-06-2016 ರಂದು ಪುನಃ ನಾನು ಸೊರಬ ಠಾಣೆಗೆ ಬಂದಿಲ್ಲ ಮತ್ತು ಆರೋಪಿತರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೊರಬ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಭುಜಕ್ಕೆ ಮತ್ತು ಹೆಬ್ಬೆರಳಿಗೆ ಬಿದ್ದಿದ್ದ ಪೆಟ್ಟು ಅದು ಕಲ್ಲು ಮತ್ತು ಕಟ್ಟಿಗೆ ಯಿಂದ ಇರಬಹುದು

ಎಂದು ನನಗೆ ಹೇಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಮು.ಮಾ. 7 ರಿಂದ 10 ಕಲ್ಲುಗಳಿಂದ ಹೊಡೆದರೆ ರಕ್ತ ಹೆಪ್ಪುಗಟ್ಟುವುದಿಲ್ಲ, ರಕ್ತಸ್ರಾವ ವಾಗುತ್ತದೆ ಎಂದರೆ ಸಾಕ್ಷಿ ಅದು ನನ್ನ ಭುಜಕ್ಕೆ ಬಿದ್ದಿದರಿಂದ ರಕ್ತಸ್ರಾವವಾಗಿಲ್ಲ ಎಂದು ನುಡಿದಿದ್ದಾರೆ. ನನ್ನ ಬಲಗೈ ಹೆಬ್ಬೆರಳಿಗೆ ಮು.ಮಾ.7 ರಿಂದ 10 ನ್ನು ಬೀಸಿಹೊಡೆದರೆ ರಕ್ತಸ್ರಾವ ವಾಗುವ ಗಾಯವಾಗುತ್ತಿತ್ತು ಎಂದರೆ ಸಾಕ್ಷಿ ಅದು ನನಗೆ ದೊಣ್ಣೆಯಿಂದ ಬಿದ್ದಿದೆ ಎಂದು ನುಡಿದಿದ್ದಾರೆ. ಮು.ಮಾ. 3 ರಿಂದ 6 , 7 ರಿಂದ 10, 12 ಮತ್ತು 14 ರಿಂದ 16 ಈ ಘಟನೆಯಲ್ಲಿ ಉಪಯೋಗಿಸಿದವು ಎಂದು ಹೇಳಲು ನನಗೆ ಸಾಧ್ಯವಾಗುತ್ತದೆ. ಮು.ಮಾ.3 ರಿಂದ 6 ಸಾಮಾನ್ಯವಾಗಿ ಬೇಲಿ ಹಾಕಲು ಉಪಯೋಗಿಸುವ ಕಾಡುಜಾತಿಯ ದೊಣ್ಣೆಗಳಾಗಿದ್ದು ಅವು ಬೇಲಿ ಬಳಿ ಸಾಕಷ್ಟು ಸಿಗುತ್ತದೆ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6, 12 ಮತ್ತು 14 ರಿಂದ 16 ಅಂದರೆ ನಾಲ್ಕು ದೊಣ್ಣೆಗಳು ಮತ್ತು ನಾಲ್ಕು ರಾಡ್ ಗಳು ಇದ್ದು ಆರೋಪಿತರು 7 ಜನ ಮಾತ್ರ ಇರುವುದರಿಂದ ಘಟನೆ ಸಮಯದಲ್ಲಿ ಯಾವ ಆರೋಪಿತನ ಕೈ ಎರಡು ಆಯುಧಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ.

ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 1 ರಿಂದ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳನ್ನು ಮೆಚ್ಚಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ

ಚಿಕ್ಕಮಗಳೂರಿನಿಂದ ಅಜ್ಜಂಪುರಕ್ಕೆ ನೇರವಾಗಿ ಬಸ್ಗಳು ಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಬರುವ ಮೊದಲು ಚಾಸಃ 1 ರವರು ಆರೋಪಿತರನ್ನು ಶೋಧಿಸುತ್ತಾ ಎಷ್ಟು ಬಾರಿ ಮೊಬೈಲ್ ನಲ್ಲಿ ಕರೆ ಮಾಡಿದ್ದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾವು ಈ ಪ್ರಕರಣದಲ್ಲಿ ತೆಗೆದುಕೊಂಡು ಹೋಗಿದ್ದ ಖಾಸಗಿ ವಾಹನದ ಮಾಲಿಕರು ಚಾಸಃ1 ಗೆ ಗೊತ್ತು. ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ವಾಹನದಲ್ಲಿ ನಾವು 5 ಜನ ಪೋಲಿಸರು ಇದ್ದು ಚಾಲಕ ಮಾತ್ರ ಖಾಸಗಿ ವ್ಯಕ್ತಿಯಾಗಿರುತ್ತಾನೆ

ಈ ಘಟನೆಯಲ್ಲಿ ನನಗೆ ಹೊಡೆತ ಬಿದ್ದಿದ್ದರಿಂದ ನಾನು ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನಾನು ಹೊಡೆತ ಹೇಗೆ ಬಿದ್ದಿದೆ ಎಂದು ಕೇಳಿದ್ದೇನೆ. ನನಗೆ ಘಟನೆ ಯಲ್ಲಿ ತೀವ್ರ ಸ್ವರೂಪದ ಗಾಯಗಳಾಗಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಪೊದೆಗಳು ಇದ್ದುದರಿಂದ ನಾವು ಓಡಾಡುವಾಗ ನನಗೆ ಗಾಯಗಳಾಗಿದ್ದು, ನಾನು ಹೇಳುವಂತೆ ನನಗೆ ಆರೋಪಿತರು ಯಾವುದರಿಂದಲೂ ಹೊಡೆದಿಲ್ಲ ಎಂದರೆ ಸರಿಯಲ್ಲ. ಸೊರಬ ಠಾಣೆಗೆ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 01-03-2016, 07-03-2016, 29-03-2016 ಮತ್ತು 19-06-2016 ರಂದು ಹೋಗಿರುತ್ತೇನೆ. ನನಗೆ ಠಾಣೆಗೆ ಬರಲು ಸೊರಬ ಪೋಲಿಸರು ಪೋನ್ ಮಾಡಿ ತಿಳಿಸಿದ್ದರು, ನನಗೆ ನೋಟಿಸು ಕೊಟ್ಟಿಲ್ಲ, ಚಾಸಃ 1 ಗೆ ನೋಟಿಸು ಕೊಟ್ಟಿರಬಹುದು. ಆರೋಪಿತರು ಯಾವ್ಯಾವಾ ದಿಕ್ಕಿಗೆ ಯಾರ್ಯಾರು ಓಡಿಹೋದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

ನಾನು ಖಾಸಗಿ ವಾಹನದ ಹಿಂಭಾಗದ ಸೀಟಿನಲ್ಲಿ ಮಧ್ಯದಲ್ಲಿ ಒಟ್ಟು ಕುಳಿತಿದ್ದೆವು, ಅದು ಡಸ್ಟರ್ ವಾಹನದ 3 ನೇ ಸೀಟು ಎಂದರೆ ಇರಬಹುದು, ನನಗೆ ಜ್ಞಾಪಕವಿಲ್ಲ. ಚಿಕ್ಕಮಗಳೂರಿನ ಎಸ್.ಪಿ. ಕಛೇರಿಯಿಂದ ಬಸವಹಳ್ಳಿ ಠಾಣೆಯು 4 ಕಿಮೀ ಅಂತರದಲ್ಲಿದೆ. ಸೊರಬ ಠಾಣೆಯಲ್ಲಿ ಪೋಲಿಸರು ಹೇಳಿದ್ದರಿಂದ ನನಗೆ ಆರೋಪಿತರ ಹೆಸರು ಗೊತ್ತಾಗಿದೆ ಎಂದರೆ ಸರಿ. ಮು.ಮಾ. 1 ರಿಂದ 16 ರಮೇಲೆ ಯಾವುದೇ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ.

ನಾನು ಹೇಳುವಂತೆ ಆ ದಿನ ಯಾವುದೇ ಘಟನೆ ಆಗಿಲ್ಲ, ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಯಾವುದೇ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಸಾಮಾನ್ಯವಾಗಿ ನಾವು ಯಾವುದೇ ಕರ್ತವ್ಯದ ಮೇಲೆ ಠಾಣೆಯಿಂದ ಹೊರಗೆ ಹೋದಾಗ ಅದನ್ನು ವಿವರವಾಗಿ ರಿಜಿಸ್ಟರ್ ನಲ್ಲಿ ಬರೆಯ ಬೇಕಾಗುತ್ತದೆ ಎಂದರೆ ಸಾಕ್ಷಿ ವಿಶೇಷ ಕರ್ತವ್ಯಕ್ಕೆ ನಿಯೋಜಿಸಿದಾಗ ಅದನ್ನು ಬರೆಯುವ ಅವಶ್ಯಕತೆ ಇಲ್ಲಎಂದು ನುಡಿದಿದ್ದಾರೆ. ನಾವು

ತೆಗೆದುಕೊಂಡು ಹೋದ ಪಿರ್ಯಾದಿದಾರ ಮೊಬೈಲ್ ನಿಂದ ಆರೋಪಿತರಿಗೆ ಕರೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **03**
ಸಿಡಬ್ಲೂ **04**

| | | |
|---|---|---|
| ಸಾಕ್ಷಿ ಹೆಸರು | – | ನವೀನ್ ಕುಮಾರ್ ಸಿ.ಎಂ. |
| ತಂದೆ ಹೆಸರು | – | ಮಂಜನಾಯ್ಕ |
| ವಯಸ್ಸು | – | **28** ವರ್ಷ |
| ಉದ್ಯೋಗ | – | ಪೊಲೀಸ್ ಕಾನ್ಸ್ ಟೇಬಲ್, ಅಜ್ಜಂಪುರ ಪೋಲಿಸ್ ಠಾಣೆ,. |
| ವಿಳಾಸಃ | – | ತರಿಕೆರೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ **27-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು **2015** ನೇ ಇಸವಿಯಿಂದ ಇಲ್ಲಿಯವರೆಗೂ ಅಜ್ಜಂಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **01-03-2016** ರಂದು ಚಾಸಃ **1** ರವರಿಗೆ ಮಾನ್ಯ ಎಸ್.ಪಿ.ಯವರ ಆದೇಶದ ಮೇರೆಗೆ ಅಜ್ಜಂಪುರ ಠಾಣೆಯಿಂದ ಚಾಸಃ**1** ರವರು ಹಾಗೂ ಚಾಸಃ **3** ರವರನ್ನು ಹಾಗೂ ಆರಕ್ಷಕ ಅಧೀಕ್ಷಕ ಸಿಬ್ಬಂದಿಯವರಾದ ಚಾಸಃ **2** ಮತ್ತು **5** ರವರನ್ನು ಡಸ್ಟರ್ ವಾಹನದಲ್ಲಿ ಮೊಕದ್ದಮೆ ಸಂಃ **60/2016** ಬಸವನಹಳ್ಳಿ ಠಾಣೆಯ ದೂರಿನಲ್ಲಿದ್ದ ಆರೋಪಿತರ ಪತ್ತೆಗಾಗಿ ಹೋಗಿದ್ದು ಅಜ್ಜಂಪುರ ಪೋಲಿಸ್ ಠಾಣೆಯಿಂದ ಬೆಳಿಗ್ಗೆ **10.00** ಗಂಟೆಗೆ ಹೊರಟೆವು. ಚಾಸಃ **1** ರವರು ಆರೋಪಿತರ ಪತ್ತೆಗಾಗಿ ಪಿರ್ಯಾದಿಯ ಮೊಬೈಲ್ ನಂಬರ್ **9448211028** ನಿಂದ ಆರೋಪಿಗಳ ಮೊಬೈಲ್ ಗೆ ಚಾಸಃ**1** ಚಿನ್ನದ ಖರೀದಿಸುವ ಗ್ರಾಹಕರ ಸೋಗಿನಲ್ಲಿ ಕರೆ ಮಾಡಿದ್ದು, ಅವರು ಮೊದಲು ಹಿರೆಕೆರೂರುಗೆ ಬರಲು ತಿಳಿಸಿದ್ದು, ನಂತರ ಶಿರಾಳಕೊಪ್ಪ, ಅಲ್ಲಿಂದ ಚತ್ರದಹಳ್ಳಿಯ ಕೆರೆ ಬಳಿ ಬರಲು ತಿಳಿಸಿದ್ದು, ಆಗ ನಾವು ಸದರಿ ಚತ್ರದ ಹಳ್ಳಿಗೆ ಹೋದಾಗ ಸಮಯ ಮದ್ಯಾಹ್ನ **2.45** ಗಂಟೆ ಆಗಿತ್ತು. ನಾವು

ನಮ್ಮ ವಾಹನವನ್ನು ಶಿರಾಳಕೊಪ್ಪ ಸೊರಬದ ಕರೆ ದಡದಲ್ಲಿ ನಿಲ್ಲಿಸಿದೆವು. ಕೆರೆಯ ಬಳಿ ಚತ್ರದ ಹಳ್ಳಿಯ ಬೋರ್ಡ ಇತ್ತು. ನಾವು ವಾಹನವನ್ನು ಕೆರೆಯ ದಡದಲ್ಲಿ ನಿಲ್ಲಿಸಿದೆವು. ನಾವು ಅದರಂತೆ ಆ ಸ್ಥಳಕ್ಕೆ ತೆರಳಿದಾಗ ನಮ್ಮಲ್ಲಿ ಹಣ ಇರಬಹುದು ಎಂದು ಬಾವಿಸಿ ಕೆರೆ ಅಂಗಳದ ಪೊದೆಯಿಂದ ಸುಮಾರು ಐದರಿಂದ ಎಂಟು ಜನರು ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಕಲ್ಲು ದೊಣ್ಣೆ ಹಾಗೂ ರಾಡ್ ನಿಂದ ಹಲ್ಲೆ ನಡೆಸಲು ಪ್ರಾರಂಭಿಸಿದರು.

ಆಗ ಚಾಸಃ 1, ನಾವು ಪೋಲಿಸರು ನಮಗೆ ಹಲ್ಲೆ ಮಾಡಬೇಡಿ ಎಂದು ತಿಳಿಸಿದರೂ ಸಹ ಅವರೆಲ್ಲಾ ಮಾತನಾಡಿಕೊಂಡು ಇವರನ್ನು ಯಾವುದೇ ಕಾರಣಕ್ಕೂ ಜೀವ ಸಹಿತ ಬಿಡಬಾರದು ಎಂದು ಮಾತನಾಡಿಕೊಂಡು ಮತ್ತೆ ಕಲ್ಲು ದೊಣ್ಣೆಗಳಿಂದ ಹಲ್ಲೆ ನಡೆಸಲು ಪ್ರಾರಂಭಿಸಿದರು. ನಂತರ ಚಾಸಃ1 ತನ್ನ ಪ್ರಾಣ ರಕ್ಷಣೆಗೆ ನಮ್ಮ ಇಲಾಖೆಯವರು ನೀಡಿದ್ದ ಪಿಸ್ತೂಲ್‌ನಿಂದ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದರು. ನಂತರ ಪುನಃ ಆರೋಪಿರು ಕಲ್ಲು ದೊಣ್ಣೆಗಳಿಂದ ದಾಳಿ ಮಾಡುವುದು ಬಿಡಲಿಲ್ಲ. ಆದರೂ ದಾಳಿ ನಿಲ್ಲದ ಕಾರಣ ಚಾಸಃ1 ಮತ್ತೆ ನಾಲ್ಕು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿರುತ್ತಾರೆ. ಇದರ ನಂತರ ಆರೋಪಿತರು ಹೆದರಿ ಓಡಿಹೋಗಿರುತ್ತಾರೆ. ನಂತರ ಮಾನ್ಯ ಎಸ್.ಪಿ. ಚಿಕ್ಕಮಗಳೂರು ಇವರಿಗೆ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿ, ನನ್ನ ಎರಡು ಕಾಲುಗಳಿಗೆ ತರಚಿದ ಗಾಯಗೊಂಡಿದ್ದರಿಂದ ಶಿರಾಳಕೊಪ್ಪದ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆದೆವು. ಆರೋಪಿತರು ಘಟನೆಯ ಸಮಯದಲ್ಲಿ ನನ್ನ ಮೇಲೆ ಹಲ್ಲೆ ಮಾಡುತ್ತಿರುವಾಗ ಅವರವರು ತಮ್ಮ ತಮ್ಮ ಹೆಸರುಗಳನ್ನ ಕೂಗಿಕೊಂಡು ಹೊಡಿಯಿರಿ ಎಂದು ಹೇಳುತ್ತಿದ್ದಾಗ ನನಗೆ ಆರೋಪಿತರ ಹೆಸರುಗಳು ತಮ್ಮಣ್ಣಿ, ಮಂಜು, ಶಿವು, ಸುಭಾಷ್, ವೆಂಕಟೇಶ್, ನಾಗೇಶ್ ಮತ್ತು ಮಹದೇವ ಎಂದು ಗೊತ್ತಾಗಿರುತ್ತದೆ.

ಆರೋಪಿತರು ನಮ್ಮ ಹಲ್ಲೆ ಮಾಡಲು ಪ್ರಾರಂಭಿಸಿದಾಗ ನಾವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆವು. ನಾವು ಆರೋಪಿತರ ಹಲ್ಲೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದೇ ಇದ್ದಲ್ಲಿ ಅವರ ಹಲ್ಲೆಗೆ ನೇರವಾಗಿ ಸಿಕ್ಕಿದರೆ ನಮ್ಮ ಪ್ರಾಣಕ್ಕೆ ಅಪಾಯವಾಗುವ ಸಂಭವವಿತ್ತು. ನಾವು ಘಟನಾ ಸ್ಥಳದಿಂದ ವಾಪಾಸು ನಮ್ಮ ವಾಹನದ ಬಳಿ ಬರುವಾಗ ಇಬ್ಬರು ವ್ಯಕ್ತಿಗಳಾದ ಹಬೀಬುಲ್ಲಾ ಮತ್ತು ರಾಮಪ್ಪ ಬಂದಿದ್ದರು. ನಾನು ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ನಂತರ ನಾವು ನೇರವಾಗಿ ಸೊರಬ ಠಾಣೆಯ ವ್ಯಾಪ್ತಿಯಲ್ಲಿರುವುದರಿಂದ ಚಾಸಃ1 ರವರು ಒಂದು ಪಿರ್ಯಾದು ತಯಾರಿಸಿ ಕೊಟ್ಟರು. ತನಿಖಾಧಿಕಾರಿಯು ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ. ಈ ಘಟನೆಯಲ್ಲಿ ನಾವು ತಪ್ಪಿಸಿಕೊಳ್ಳದಿದ್ದರೇ ನಮ್ಮ ಪ್ರಾಣಕ್ಕೆ ಆರೋಪಿತರು ಹಾನಿವುಂಟುಮಾಡುತ್ತಿದ್ದರು. ಸೊರಬ ಠಾಣೆಯವರು ನನ್ನ ಹೇಳಿಕೆ ಪಡೆದಿರುತ್ತಾರೆ.

ದಿಃ 07-03-2016 ರಂದು ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ 4 ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ, ಅವರನ್ನು ಗುರುತಿಸಲು ಕರೆದರು. ಅವರುಗಳ ಹೆಸರು ನಾಗೇಶ, ವೆಂಕಟೇಶ, ಸುಭಾಷ್ ಮತ್ತು ತಮ್ಮಣ್ಣ ಗುರುತಿಸಿದೆವು. ಸುಭಾಷ್ ನ ಸ್ವಾಯಿಚ್ಛಾ ಹೇಳಿಕೆಯನ್ವಯ ವಶಪಡಿಸಿಕೊಂಡ ಕಪ್ಪು ಬಣ್ಣದ ಸಾಮ್ ಸಂಗ್ ಮೊಬೈಲ್ ಗುರುತಿಸಿದೆನು. ನಂತರ ತನಿಖಾಧಿಕಾರಿಯವರು ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ 29-03-2016 ರಂದು ಪುನಃ ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ 2 ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ, ಅವರನ್ನು ಗುರುತಿಸಲು ಕರೆದರು. ಅವರುಗಳು ಮಹಾದೇವ ಮತ್ತು ಶಿವು ಗುರುತಿಸಿದೆವು. ಕೃತ್ಯಕ್ಕೆ ಬಳಸಿದ ರಾಡ್ಗಳು ಗುರುತಿಸಿದೆವು. ನಂತರ ತನಿಖಾಧಿಕಾರಿಯವರು ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ 19-06-2016 ರಂದು ಪುನಃ ತನಿಖಾಧಿಕಾರಿಯವರು ಸೊರಬ ಠಾಣೆಗೆ ಬರಲು ತಿಳಿಸಿದ್ದು, ಈ ಹಲ್ಲೆಯ ಮೊಕದ್ದಮೆಗೆ ಸಂಬಂಧಿಸಿದಂತೆ ಮಂಜು ಎನ್ನುವ 7 ನೇ ಆರೋಪಿ ನಿರೀಕ್ಷಣಾ ಜಾಮೀನು ತಂದು ಹಾಜರಾಗಿದ್ದು ಆತನನ್ನು ಗುರುತಿಸಲು ಕರೆದರು. ನಾನು ಆತನನ್ನು ಗುರುತಿಸಿದೆನು. ನಾನು ಆರೋಪಿತರನ್ನು ಗುರುತಿಸಿದ್ದಕ್ಕೆ ತನಿಖಾಧಿಕಾರಿಯು ನನ್ನ ಹೇಳಿಕೆಯನ್ನು ಪಡೆದುಕೊಂಡರು.

ಚಾಸಃ1 ರವರು ಆ ದಿನ ಗಾಳಿಯಲ್ಲಿ ಗುಂಡು ಹಾರಿಸಿದ್ದ ಮು.ಮಾ.1 ಪಿಸ್ತೂಲ್ ನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.3 ರಿಂದ 6

ದೊಣ್ಣೆಗಳು ಮತ್ತು ಮು.ಮಾ. 7 ರಿಂದ 10 ಕಲ್ಲುಗಳು, ಮು.ಮಾ.12, 14 ರಿಂದ 16 ರಾಡ್ ಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಮು.ಮಾ.13 ಮೊಬೈಲನ್ನು ಗುರುತಿಸುತ್ತೇನೆ.

ಆ ದಿನ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿ ನಾವು ಅವರನ್ನು ಠಾಣೆಯಲ್ಲಿ ಗುರುತಿಸಿದ್ದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವರನ್ನು ಗುರುತಿಸುತ್ತೇನೆ.

ಪಾಟೀ ಸವಾಲುಃ **1** ರಿಂದ **4** ನೇ ಆರೋಪಿತರ ಪರ ಶ್ರೀ.ಕೆಕೆಎಸ್.ವಕೀಲರಿಂದಃ

ಅಜ್ಜಂಪುರದಿಂದ ನಾವು ತರಿಕೆರೆ, ಭದ್ರಾವತಿ, ಶಿವಮೊಗ್ಗ ಮಾರ್ಗವಾಗಿ ಶಿರಾಳಕೊಪ್ಪಕ್ಕೆ ಬಂದಿರುತ್ತೇವೆ. ಅಜ್ಜಂಪುರದಿಂದ ಶಿರಾಳಕೊಪ್ಪಕ್ಕೆ 130 - 134 ಕಿಮೀ ಇದೆ. ಸಾಮಾನ್ಯವಾಗಿ ಶಿರಾಳಕೊಪ್ಪಕ್ಕೆ ಬರಲು ಯಾವುದೇ ಅಡೆತಡೆ ಇಲ್ಲದಿದ್ದರೆ 2 ರಿಂದ 2.30 ಗಂಟೆ ತಗಲುತ್ತದೆ. ಶಿವಮೊಗದಿಂದ ಬರುವ ಸಮಯದಲ್ಲಿ ನಮಗೆ ಆರೋಪಿತರು ಹಿರೆಕೇರೂರು ಬೇಡ ಶಿರಾಳಕೊಪ್ಪಕ್ಕೆ ಬನ್ನಿ ಎಂದು ಹೇಳಿರುತ್ತಾರೆ.

ಆ ದಿನ ಪ್ರಯಾಣ ಮಾಡುತ್ತಿದ್ದ ಡಸ್ಟರ್ ವಾಹದ ಹಿಂದಿನ ಸೀಟಿನಲ್ಲಿ 3 ಜನ ಪ್ರಯಾಣ ಮಾಡಬಹುದು ಎಂದರೆ ಸರಿ. ಮುಂಭಾಗದಲ್ಲಿ ಒಬ್ಬ ಚಾಲಕ ಮತ್ತು ಪಕ್ಕದಲ್ಲಿ ಒಬ್ಬರು ಕೂರಬಹುದು ಎಂದರೆ ಸರಿ. ನಾವು ಶಿರಾಳಕೊಪ್ಪಕ್ಕೆ ಮದ್ಯಾಹ್ನ 2.45 ಗಂಟೆಗೆ ಬಂದಿರುತ್ತೇವೆ. ಅಲ್ಲಿಂದ ಚತ್ರದ ಹಳ್ಳಿಯ ಕೆರೆ ಬಳಿ 2.50 ಗಂಟೆಗೆ ಬಂದೆವು. ನಾವು ಆ ಸಮಯದಲ್ಲಿ ರಸ್ತೆಯ ಎಡಭಾಗದಲ್ಲಿ ಸೊರಬ ಕಡೆ ಹೋಗುವ ದಿಕ್ಕಿನಲ್ಲಿ ವಾಹನ ನಿಲ್ಲಿಸಿದ್ದು ನನಗೆ ಅದು ಯಾವ ದಿಕ್ಕು ಎಂದು ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಚಾಸಃ1 ರವರು ಆರೋಪಿತ ಮಾತನಾಡುತ್ತಿದ್ದ ಹೆಸರು ಹೇಳಿದ್ದು ಆತನ ಹೆಸರು ಹೇಳಿರಲಿಲ್ಲ. ನಾವು ಶಿರಾಳಕೊಪ್ಪ ಕ್ಕೆ ಬರುವ ಸಮಯದಲ್ಲಿ ತಡವಾಗಬಹುದು ಎಂದು ಹೇಳಿ ಊಟ ಮಾಡದೇ ಸ್ನ್ಯಾಕ್ಸ್ ಮಾತ್ರ ತೆಗೆದುಕೊಂಡು ಬಂದೆವು ಘಟನಾ ಸ್ಥಳವು ರಸ್ತೆಯಿಂದ ಸ್ವಲ್ಪ ಇಳಿಜಾರಿನಲ್ಲಿದೆ ಎಂದರೆ ಪ್ರಾರಂಭದಲ್ಲಿ ಸ್ವಲ್ಪ ಇಳಿಜಾರು ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದಿಂದ ನಮ್ಮ ವಾಹನ ನಿಲ್ಲಿಸಿದ ಜಾಗಕ್ಕೆ 70 ರಿಂದ 100 ಮೀಟರ್ ಅಂತರದಲ್ಲಿದೆ. ವಾಹನದಿಂದ ಇಳಿದು ಎಲ್ಲರೂ ಜೊತೆಯಲ್ಲಿಯೇ ಹೋಗಿರುತ್ತೇವೆ. ನಾವು ವಾಹನ ನಿಲ್ಲಿಸಿದ್ದ ಸ್ಥಳದಲ್ಲಿ ಚತ್ರದ ಹಳ್ಳಿಯ ಬೋರ್ಡ ಮಾತ್ರ

ಇದ್ದು ಅಲ್ಲಿ ಗ್ರಾಮ ಇರಲಿಲ್ಲ. ಘಟನಾ ಸ್ಥಳದಿಂದ ಶಿರಾಳಕೊಪ್ಪಕ್ಕೆ 3 ಕಿಮೀ, ಅಂತರವಿದೆ. ಘಟನಾ ಸ್ಥಳದಿಂದ ಸೊರಬಕ್ಕೆ ಎಷ್ಟು ಕಿಮೀ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಶಿರಾಳಕೊಪ್ಪ ಹಾಗೂ ಸೊರಬ ಎರಡು ಕಡೆ ಸರ್ಕಾರಿ ಆಸ್ಪತ್ರೆ ಮತ್ತು ಠಾಣೆಗಳು ಇವೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನಾವು ಘಟನಾ ಸ್ಥಳಕ್ಕೆ ಬರುವ ಮೊದಲು ಸೊರಬ ಠಾಣೆಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ಆರೋಪಿತರು ಪೊದೆಯೊಳಗಿಂದ ಇಬ್ಬಿಬರು ಬಂದಿದ್ದು ಅವರು ಸುಮಾರು ನಾಲ್ಕು ಐದು ಕಡೆಯಿಂದ ಬಂದಿರುತ್ತಾರೆ. ಸದರಿ ಕೆರೆ ಯಲ್ಲಿ ಯಾವುದೇ ತ್ಯಾಜ್ಯ ವಸ್ತುಗಳು ಬಿದ್ದಿರಲಿಲ್ಲ.

ಈ ಘಟನೆಯಲ್ಲಿ ನನ್ನ ಎರಡು ಕಾಲಿಗೆ ಯಾವ ಆಯುಧದಿಂದ ಹೊಡೆತ ಬಿದ್ದಿದೆ ಎಂದು ಹೇಳಲು ಆಗುವುದಿಲ್ಲ. ಆ ಗಾಯಗಳಿಂದ ನನಗೆ ರಕ್ತಸ್ರಾವವಾಗಿರುವುದಿಲ್ಲ. ನಾವು ಸೊರಬ ಠಾಣೆಯಲ್ಲಿ ಆರೋಪಿತರನ್ನು ಗುರುತಿಸಿರುವ ಬಗ್ಗೆ ಅವರ ಚಹರೆಯನ್ನು ನಾವು ಪೋಲಿಸರಿಗೆ ಹೇಳಿದ್ದು. ನನ್ನ ಹೇಳಿಕೆಯಲ್ಲಿ ಆರೋಪಿತರ ಚಹರೆ ಹೇಳಿದ್ದೇನಾ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಮು.ಮಾ.7 ರಿಂದ 10 ಕಲ್ಲುಗಳನ್ನು ಬೀಸುವಾಗ ಆರೋಪಿತರು ನಮ್ಮಿಂದ 20 ಮೀಟರ್ ದೂರದಲ್ಲಿದ್ದರು. ನಾನು ಹೇಳುವಂತೆ 20 ಮೀಟರ್ ದೂರದಿಂದ ಮು.ಮಾ.7 ರಿಂದ 10 ರಿಂದ ಹೊಡೆದರೆ ಮೂಳೆ ಮುರಿತಗೊಳ್ಳುವ ಸಾಧ್ಯತೆ ಇದೆ ಎಂದರೆ ನಿಜ. ನಾವು ಸೊರಬ ಆಸ್ಪತ್ರೆಗೆ ಹೋದಾಗ ಸುಮಾರು ಸಾಯಂಕಾಲ 6.00 ಗಂಟೆಯಾಗಿತ್ತು. ಈ ಘಟನೆ ಮದ್ಯಾಹ್ಞ 3.30 ರಿಂದ ಸಂಜೆ 4.30 ರವರೆಗೆ ಆಗಿರುತ್ತದೆ. ನಾನು ವೈದ್ಯರಿಗೆ ಘಟನೆಯ ಬಗ್ಗೆ ತಿಳಿಸಿ ಚಿಕಿತ್ಸೆ ಪಡೆದುಕೊಂಡಿದ್ದು, ಆರೋಪಿತರ ಬಗ್ಗೆ ವೈದ್ಯರ ಬಳಿ ಏನನ್ನು ಹೇಳಿರುವುದಿಲ್ಲ.

ಸಾಮಾನ್ಯವಾಗಿ ಪಿಸ್ತೂಲಿನಿಂದ ಗುಂಡು ಹಾರಿಸಿದಾಗ ಜೋರಾಗಿ ಶಬ್ದ ಬರುತ್ತದೆ ಸಾಕ್ಷಿ ಜಾಗ ವಿಶಾಲವಾಗಿದ್ದರೆ ಆ ಶಬ್ದ ಹೆಚ್ಚಾಗಿ ಕೇಳಿಸುವುದಿಲ್ಲ ಎಂದು ನುಡಿದಿದ್ದಾರೆ. ಸಾಮಾನ್ಯವಾಗಿ ಒಂದು ಬಾರಿ ಗುಂಡು ಹಾರಿಸಿದರೆ ಎದುರಿಗೆ ಇರುವ ವ್ಯಕ್ತಿ ಹೆದರಿ ಓಡಿಹೋಗುತ್ತಿದ್ದು ನಾವು ಹೇಳುವಂತೆ ಚಾಸಃ 1 ರವರು 4 ಬಾರಿ ಗುಂಡು ಹಾರಿಸುವ ಅವಶ್ಯಕತೆ ಇರಲಿಲ್ಲ ಮತ್ತು ಹಾರಿಸಿಲ್ಲ ಎಂದರೆ ಸರಿಯಲ್ಲ. ಚಾಸಃ1 ರವರು ನೇರವಾಗಿ ಗಾಳಿಯ ಮೇಲ್ಭಾಗ ದಿಕ್ಕಿನಲ್ಲಿ ಗುಂಡು ಹಾರಿಸಿದ್ದಾರೆ. ಸಾಮಾನ್ಯವಾಗಿ ಗುಂಡು ಹಾರಿಸಿದ ನಂತರ

ಖಾಲಿ ಕೊಳವೆ ಸಾಕಷ್ಟು ಅಂತರದಲ್ಲಿ ಬೀಳುತ್ತವೆ ಎಂದರೆ ಸರಿಯಲ್ಲ. ಅವರು ಹೊಡೆದ ಕೆಳಭಾಗದಲ್ಲಿ ಬೀಳುತ್ತವೆ. ಈ ಪ್ರಕರಣದಲ್ಲಿ ಎರಡು ಖಾಲಿ ಕೊಳವೆ ಸಿಕ್ಕಿದ್ದು ಉಳಿದವು ಸಿಕ್ಕಿರುವುದಿಲ್ಲ. ಆರೋಪಿ ತಮ್ಮಣ್ಣಿ ಹೆಸರು ಹೇಳಿದ್ದನ್ನು ನಾನು ಕೇಳಿಸಿಕೊಂಡಿರುತ್ತೇನೆ. ಅದೇ ರೀತಿ ತಮ್ಮಣ್ಣಿಯ ಹೆಸರನ್ನು ಆರೋಪಿತ ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ.

ನಾವು ಸೊರಬ ಠಾಣೆಯಲ್ಲಿ ನನಗೆ ಆರೋಪಿತರ ಹೆಸರು ಹೇಳಿದ್ದರಿಂದ ಅವರ ಹೆಸರುಗಳು ಗೊತ್ತಾಗಿವೆ ಎಂದರೆ ಸರಿಯಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರಲ್ಲಿ ತಮ್ಮಣ್ಣಿ , ವೆಂಕಟೇಶ, ಸುಭಾಷ್ ರನ್ನು ಗುರುತಿಸಿರುತ್ತಾರೆ.

ಈ ಘಟನೆಯಲ್ಲಿ ನನಗೆ ಯಾವುದೇ ಗಾಯಗಳಾಗಿಲ್ಲ ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಯಾವುದೇ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ, ನಾವುಗಳೇ ಅವರ ವಿರುದ್ಧ ಅವರ ಮುಗ್ಧತೆಯ ದುಲಾರ್ಭ ಪಡೆದು, ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನೆಯು ನಡೆದ ಸಮಯದಲ್ಲಿ ಸ್ಥಳದಲ್ಲಿ ಸ್ಥಳೀಯರು ಇರಲಿಲ್ಲ, ಅವರು ಸುಮಾರು 200 ರಿಂದ 300 ಮೀಟರ್ ದೂರದಲ್ಲಿ ಇಬ್ಬರು ಸ್ಥಳೀಯರು ಬಂದಿದ್ದರು. ಆ ಸ್ಥಳೀಯರು ಘಟನೆಯಾದ ನಂತರ ನಮಗೆ ಸಿಕ್ಕಿದ್ದು ಘಟನೆ ಸಮಯದಲ್ಲಿ ಅವರಿಬ್ಬರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಸ್ಥಳೀಯರು ಚಾಸಃ 6 ಮತ್ತು 7 ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6 ರಿಂದ ಹೊಡೆದರೆ ಜೀವ ಹಾನಿಯಾಗುವುದಿಲ್ಲ ಅದು ಟೊಳ್ಳು ಕಾಡು ದೊಣ್ಣೆಗಳು ಎಂದರೆ ಸರಿಯಲ್ಲ.

ನಾವು ಸೊರಬ ಠಾಣೆಗೆ ದಿಃ 07-03-2016 ರಂದು ಆರೋಪಿತರನ್ನು ಠಾಣೆಯಲ್ಲಿ ಗುರುತಿಸಲು ಕರೆದಾಗ ನಾವು ಬಂದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮು.ಮಾ.13 ಆರೋಪಿಗೆ ಸಂಬಂಧಿಸಿದೆ. ಅದು ಯಾವ ಆರೋಪಿತನದ್ದು ಎಂದು ನನಗೆ ಗೊತ್ತಿಲ್ಲ. ಮು.ಮಾ.13 ಕ್ಕೆ ಸಂಬಂಧಿಸಿದಂತೆ ಅದು ಯಾರ ಹೆಸರಿನಲ್ಲಿದೆ ಎನ್ನುವ ವಿಷಯ

ಚಾಸಃ1 ಗೆ ಗೊತ್ತಿದೆ. ನಾವು ಹಾಜರುಪಡಿಸಿರುವ ಮು.ಮಾ.12 ಮತ್ತು 14 ರಿಂದ 16 ಸೊರಬ ಠಾಣೆಯ ಕಟ್ಟಡ ಕಾಮಗಾರಿ ಕೆಲಸ ನಡೆಯುತ್ತಿದ್ದು ಅವುಗಳಲ್ಲಿ ತ್ಯಾಜ್ಯವಸ್ತುಗಳಾಗಿದ್ದು ಅವುಗಳು ಈ ಘಟನೆಗೆ ಸಂಬಂಧಿಸಿದೆ ಎಂದು ಹೇಳಿ ಈ ಘಟನೆಯಲ್ಲಿ ಅವುಗಳನ್ನು ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ. ಆರೋಪಿಗಳಲ್ಲಿ ಘಟನೆ ಸಮಯದಲ್ಲಿ 3 ರಾಡ್ಗಳು ಆರೋಪಿತರ ಕೈಯಲ್ಲಿದ್ದವು. ಅದು ಯಾವ್ಯಾವ ಆರೋಪಿಯ ಕೈಯಲ್ಲಿತ್ತು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು 29-03-2016 ರಂದು ಪುನಃ ಸೊರಬ ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪೋಲಿಸರು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 1 ರಿಂದ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳನ್ನು ಮೆಚ್ಚಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ</u>

ತನಿಖಾಧಿಕಾರಿ ನನಗೆ ಸೊರಬ ಠಾಣೆಗೆ ಬರಲು ಯಾವುದೇ ನೋಟಿಸು ಕೊಟ್ಟಿರಲಿಲ್ಲ. ನಾನಾಗಿಯೇ ಹೋಗಿದ್ದೆ. ಆ ದಿನ ನಾನು ಅಜ್ಜಂಪುರವನ್ನು ಬೆಳಿಗ್ಗೆ ಬಿಟ್ಟಿದ್ದು ಅದು ಬೇರೆ ಖಾಸಗಿ ವಾಹನದಲ್ಲಿ ಬಂದಿದ್ದು ಬಸ್ ನಲ್ಲಿ ಬಂದಿರುವುದಿಲ್ಲ. ನಾವೆಲ್ಲರೂ ಸೊರಬ ಠಾಣೆಗೆ ಒಟ್ಟಿಗೆ ಖಾಸಗಿ ವಾಹನದಲ್ಲಿ ಬಂದೆವು. ದಿಃ 07-03-2016 ರಂದು ಆ ಘಟನಾ ಸಮಯದಲ್ಲಿ ಇದ್ದವರು ಎಲ್ಲರೂ ಒಟ್ಟು ಐದು ಜನ ಬಂದಿರುತ್ತೇವೆ ಎಂದರೆ ಸರಿ. ನಾವು ಸೊರಬ ಠಾಣೆಗೆ ಬಂದಾಗ ಮಧ್ಯಾಹ್ನ 1.00 ಗಂಟೆ ಯಾಗಿತ್ತು. ನಾವು ಅಲ್ಲಿ ಸಂಜೆ 4.00 ಗಂಟೆಯವರೆಗೆ ಇದ್ದೆವು.

ದಿಃ 07-03-2016 ರಂದು ನಾನು ಸೊರಬ ಠಾಣೆಗೆ ಹೋಗಿದ್ದಾಗ ಪೋಲಿಸರು ಆರೋಪಿತರಿಂದ ರಾಡ್ ವಶಪಡಿಸಿಕೊಂಡ ಬಗ್ಗೆ ಮಹಜರ್ ಮಾಡಿದರು. ಈಗ ನನಗೆ ತೋರಿಸಿದ ಮಹಜರ್ ಅದೇ ಎಂದರೆ ನನಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ಆ ದಿನ ಪೋಲಿಸರು ನಮಗೆ ರಾಡ್ ನ್ನು ಠಾಣೆಯಲ್ಲಿ ತೋರಿಸಿರುತ್ತಾರೆ.

ನಾನು ನ್ಯಾಯಾಲಯದ ಮುಂದೆ ಹೇಳಿರುವ ಹೇಳಿಕೆಗಳು ಸೊರಬ ಪಿಎಸ್ಐ. ರವರು ಹೇಳಿದ ಹೇಳಿಕೆಯ ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 16 ರ ಮೇಲೆ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ. ಘಟನಾ ದಿನ ನಾನು ಅಜ್ಜಂಪುರ ಠಾಣೆಯಿಂದ ಬಂದಿರುತ್ತೇನೆ. ನಮ್ಮ ಠಾಣೆಯ ಪಿಎಸ್ಐ.ಗೆ ನಮ್ಮ ನ್ನು ಘಟನಾ ಸ್ಥಳಕ್ಕೆ ಕಳುಹಿಸುವ ಬಗ್ಗೆ ನಮ್ಮ ಹಿರಿಯ ಅಧಿಕಾರಿಯಿಂದ ಸಂದೇಶ ಬಂದಿದ್ದು ಆ ಪ್ರಕಾರ ನಮ್ಮ ನ್ನು ಕಳುಹಿಸಿರುತ್ತಾರೆ. ನಾವು ಐದು ಜನ ಘಟನಾ ಸ್ಥಳದಿಂದ ನೇರವಾಗಿ ಆಸ್ಪತ್ರೆಗೆ ನೇರವಾಗಿ ಹೋಗಿರುತ್ತೇವೆ. ನಮ್ಮ ಜೊತೆಯಲ್ಲಿ ಆ ಸಮಯದಲ್ಲಿ ಬೇರೆ ಯಾವುದೇ ಪೋಲಿಸ್ ಸಿಬ್ಬಂದಿ ಇರಲಿಲ್ಲ. ಮು.ಮಾ. 3 ರಿಂದ 10, 12, 14 ರಿಂದ 16 ರ ಮೇಲೆ ರಕ್ತದ ಕಲೆಗಳು ಇದ್ದು ಈಗ ಕಾಣಿಸುತ್ತಿಲ್ಲ. ಮು.ಮಾ.12, 14 ರಿಂದ 16 ರ ಮೇಲೆ ಘಟನೆಗೆ ಉಪಯೋಗಿಸಿದ ವಸ್ತುಗಳು ಎಂದು ವಿಶೇಷ ಗುರುತು ಇಟ್ಟು ಕೊಂಡಿಲ್ಲ. ಈ ರೀತಿಯ ರಾಡ್ಗಳು ಗುಜುರಿ ಅಂಗಡಿಯಲ್ಲಿ ಸಿಗಬಹುದು ಎಂದರೆ ಸಿಗಬಹುದು, ಇವುಗಳನ್ನೇ ಅರೋಪಿತರು ಉಪಯೋಗಿಸಿದ್ದಾರೆ. ನಾನು ಆ ದಿನ ಡಸ್ಟರ್ ಹಿಂದಿನ ಸೀಟಿನಲ್ಲಿ ಕುಳಿತಿದ್ದು, ಯಾವ ಭಾಗದಲ್ಲಿ ಕುಳಿತಿದ್ದೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಆರೋಪಿತರಿಗೆ ಮು.ಮಾ.ಗೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

**ಓ. ಹೇ. ಕೇ. ಸ ಇದೆ,**

**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ, (ಪೀಠಾಸೀನ, ಸಾಗರ)**